ಪ್ರಸಾರಾಂಗ ಗ್ರಂಥಮಾಲೆ
೩೯೩

ಉತ್ತರ ಕನ್ನಡದ ಆಧುನಿಕ ಕನ್ನಡ ಕಾವ್ಯ

ಎಂ. ಎನ್. ಪ್ರಭು

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಅಕ್ಟೋಬರ್, ೧೯೮೮

೩೯೩

ಉತ್ತರ ಕನ್ನಡದ ಆಧುನಿಕ ಕನ್ನಡ ಕಾವ್ಯ

ಶ್ರೀ ಎಂ. ಎನ್. ಪ್ರಭು

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಅಕ್ಟೋಬರ, ೧೯೮೮

ಪ್ರಕಾಶಕರು :

ಎಸ್. ಬಿ. ನಾಯಕ
ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು

ಅಕ್ಟೋಬರ , ೧೯೮೮

ಬೆಲೆ : ರೂ. ೧—೦೦

ಮುದ್ರಕರು :
ರಾಜಶ್ರೀ ಪ್ರಿಂಟಿಂಗ ಪ್ರೆಸ್
ತಡಕೋಡ ಗಲ್ಲಿ, ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ ಉಪನ್ಯಾಸ ಗ್ರಂಥಮಾಲೆ ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನ ಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವ ದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನವುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೮೫ ಪುಸ್ತಿಕೆಗಳು ಪ್ರಕಟ ವಾಗಿವೆ. ಅವು ಅಚ್ಚಾಗಿ ಹೊರ ಬಂದೊಡನೆ ಅವುಗಳ ಸಾವಿ ರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋ ಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಜಿ. ಕೆ. ನಾರಾಯಣ ರೆಡ್ಡಿ
ಕುಲಪತಿಗಳು

ಅರಿಕೆ

ನಾನು ಮುಂಡಗೋಡಿನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲನಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದವರು ಉತ್ತರ ಕನ್ನಡದ ಹಳದೀಪುರದ ಮಾಧ್ಯಮಿಕ ಶಾಲೆಯಲ್ಲಿ ದಿನಾಂಕ ೧೬-೧-೧೯೮೫ ರಂದು ಏರ್ಪಡಿಸಿದ "ಉತ್ತರ ಕನ್ನಡದ ಆಧುನಿಕ ಕನ್ನಡ ಕಾವ್ಯ" ಎಂಬ ವಿಷಯದ ಮೇಲೆ ಮಾಡಿದ ನನ್ನ ಭಾಷಣದ ಸಾರವನ್ನು ಈ ಚಿಕ್ಕ ಹೊತ್ತಿಗೆಯಲ್ಲಿ ಪ್ರಕಟಿಸಲಾಗಿದೆ.

ಆಧುನಿಕ ಕನ್ನಡ ಸಾಹಿತ್ಯಕ್ಕೆ ಉತ್ತರ ಕನ್ನಡ ಜಿಲ್ಲೆಯ ಕೊಡುಗೆ ಪ್ರಶಂಸನೀಯವಾದುದು. ಉಳಿದೆಲ್ಲ ಜಿಲ್ಲೆಗಳಿ-ಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರು ಈ ಜಿಲ್ಲೆಯಲ್ಲಿದ್ದದ್ದು ಅಭಿಮಾನದ ಸಂಗತಿ. ಇಲ್ಲಿಯ ಆಧುನಿಕ ಕನ್ನಡ ಕಾವ್ಯ ತನ್ನದೇ ವೈಶಿಷ್ಟ್ಯ ವೈವಿಧ್ಯಗಳಿಂದೊಡಗೂಡಿದೆ. ಭಾಷಣದ ವಿಷಯಕ್ಕೆ ಬೇಕಾದ ಎಲ್ಲ ಕವನ ಸಂಗ್ರಹಗಳು ಲಭ್ಯವಿರದಿದ್ದರೂ ಯಾವುದೇ ಮಹತ್ವದ ಕವನ ಸಂಗ್ರಹವನ್ನು ನಿರ್ಲಕ್ಷಿಸಿಲ್ಲ. "ನಾನೊಬ್ಬ ಕಾವ್ಯಭೃಂಗ" ಎಂಬಂತೆ ಉತ್ತರ ಕನ್ನಡದ ಆಧುನಿಕ ಕಾವ್ಯದಲ್ಲಿಯ ಆಸ್ವಾದವನ್ನು ಹೀರಿ ಅನುಭವಿಸಿದ್ದನ್ನು ಅಂದು ಸಭಿಕರೊಡನೆ ಹಂಚಿಕೊಂಡಿದ್ದೇನೆ ಅಷ್ಟೆ. ನನ್ನ ಅನಿಸಿಕೆಗಳನ್ನು ನಿಷ್ಪಕ್ಷಪಾತವಾಗಿ ವಸ್ತುನಿಷ್ಠ-ವಾಗಿ ಸಭಿಕರ ಮುಂದಿಟ್ಟು ಕೃತಿಗಳ ಮೌಲ್ಯಮಾಪನವನ್ನು

ಮಾಡಲು ಪ್ರಯತ್ನಿಸಿದ್ದೇನೆ. ಸಭಿಕ ವರ್ಗ ಅಂದು ನನ್ನ ದೀರ್ಘ ಭಾಷಣವನ್ನು ತದೇಕಚಿತ್ತದಿಂದ ಕೇಳಿ ಉತ್ತಮ ರೀತಿಯಿಂದ ಸ್ಪಂದಿಸಿ ಪ್ರೋತ್ಸಾಹಿಸಿದ್ದು ನನಗೆ ಸಮಾಧಾನವನ್ನು ತಂದುಕೊಟ್ಟಿದೆ. ಈ ಮಾಧ್ಯಮಿಕ ಶಾಲೆಯ ಅಧ್ಯಾಪಕ ವರ್ಗ ವಿದ್ಯಾರ್ಥಿ ವೃಂದ ಹಾಗೂ ಅಲ್ಲಿ ಸೇರಿದ ಇತರ ಗಣ್ಯ ನಾಗರಿಕರಿಗೂ ನಾನು ಕೃತಜ್ಞನಾಗಿದ್ದೇನೆ.

ನನಗೆ ಭಾಷಣ ಮಾಡಲು ಅವಕಾಶವಿತ್ತು ಅದನ್ನು ಪುಸ್ತಕ ರೂಪದಲ್ಲಿ ಬೆಳಕಿಗೆ ತಂದ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕ ಅವರಿಗೂ ಮತ್ತು ಇತರ ಅಧಿಕಾರ ವರ್ಗಕ್ಕೂ ನಾನು ಚಿರಋಣಿಯಾಗಿದ್ದೇನೆ.

ಸರಕಾರಿ ಪ್ರಥಮ ದರ್ಜೆ ಕಾಲೇಜು, **ಎಂ. ಎನ್. ಪ್ರಭು**

ಹೆಬ್ರಿ. (ದ. ಕ.)

ಪರಿವಿಡಿ

ಪ್ರಸ್ತಾವನೆ

ವಿಸ್ತಾರವಾದ ವ್ಯಾಪ್ತಿಯುಳ್ಳ ಈ ವಿಷಯದ ಮೇಲೆ ಭಾಷಣ ಮಾಡುವದು ನಿಜವಾಗಿಯೂ ದುಸ್ತರವಾದ ಸಾಹಸ. ಉತ್ತರ ಕನ್ನಡದ ಆಧುನಿಕ ಎಲ್ಲ ಕವಿಗಳ ಕವನಸಂಕಲನಗಳನ್ನು ಆಮೂಲಾಗ್ರವಾಗಿ ಓದಿ ಅರಗಿಸಿಕೊಂಡು ಪ್ರತಿಕ್ರಿಯೆಗಳನ್ನು ಪ್ರಕಟಿಸಿ ಮೌಲ್ಯಮಾಪನವನ್ನು ಮಾಡುವದು ಕಷ್ಟಸಾಧ್ಯ. ಅನೇಕ ಸಮಸ್ಯೆಗಳು ನನ್ನ ಎದುರಿಗೆ ಧುತ್ತೆಂದು ನಿಲ್ಲುವದು ಅಸಹಜವೇನಲ್ಲ. ಎಲ್ಲ ಕವಿಗಳ ಎಲ್ಲ ಕವನಸಂಗ್ರಹಗಳನ್ನು ನಾನು ಓದಿಲ್ಲ. ಎಷ್ಟೋ ಕವನ ಸಂಗ್ರಹಗಳು ನನಗೆ ಸಿಕ್ಕಿಲ್ಲ. ಕೆಲವೊಂದು ಕವನ ಸಂಗ್ರಹಗಳು ಆಯಾ ಕವಿಗಳ ಹತ್ತಿರ ಸಹ ಇಲ್ಲ. ಎಲ್ಲ ಕವನಸಂಗ್ರಹಗಳನ್ನು ಕೂಡಿ ಕಲೆ ಹಾಕುವ ಕಾರ್ಯವೂ ವಿಫಲವಾಗಿದೆ. ಅಷ್ಟೇ ಅಲ್ಲದೆ ಒಂದೆರಡು ತಾಸುಗಳಲ್ಲಿ ವಿಸ್ತಾರವಾಗಿ ಎಲ್ಲರ ಕಾವ್ಯದ ಲಕ್ಷಣಗಳನ್ನೂ ವೈಶಿಷ್ಟಗಳನ್ನೂ ಸೊಗಸನ್ನೂ ನಿವೇದಿಸುವದು ಅಸಾಧ್ಯವಾದ ಮಾತು; ಕೂಲಂಕಷವಾಗಿ ವಿವೇಚಿಸುವದು ಸಾಧ್ಯವೇ ಇಲ್ಲ. ಆದ್ದರಿಂದ ಉತ್ತರಕನ್ನಡದ ಪ್ರಮುಖ ಕವಿಗಳ ಕೃತಿಪರಿಚಯವನ್ನು ಮಾಡಿಕೊಡುವುದೇ ನನ್ನ ಉದ್ದೇಶ. ನಾನು ಎಲ್ಲವನ್ನೂ ವಿಮರ್ಶಕನೆಂದು ಅಧಿಕಾರವಾಣಿಯಿಂದ ಹೇಳುತ್ತಿಲ್ಲ. ರಸಿಕನಾಗಿ ಕಾವ್ಯರಸವನ್ನು ಉಂಡು ನನಗೆ ಸಿಕ್ಕ ಆಸ್ವಾದವನ್ನು

ನಿಮ್ಮೊಡನೆ ಹಂಚಿಕೊಳ್ಳುತ್ತಿದ್ದೇನೆ. ನನ್ನ ವೈಯಕ್ತಿಕ ಅನಿಸಿಕೆಗಳನ್ನು ಅಭಿಪ್ರಾಯಗಳನ್ನು ನಿಷ್ಪಕ್ಷಪಾತವಾಗಿ, ನಿರ್ದಾಕ್ಷಿಣ್ಯವಾಗಿ ಆದರೆ ವಸ್ತುನಿಷ್ಠವಾಗಿ ನಿಮ್ಮೆದುರು ಇಡುತ್ತಿದ್ದೇನೆ. ಸಾಧ್ಯವಿದ್ದಷ್ಟು ಸಂಕ್ಷೇಪವಾಗಿ ಉತ್ತರಕನ್ನಡದ ಕವಿಗಳು ಕೊಟ್ಟ ಕೊಡುಗೆ ಅವರ ಬರವಣಿಗೆ ಮತ್ತು ಅವರ ಬೆಳವಣಿಗೆ ಅವರು ಖಚಿತವಾಗಿ ನಿರ್ದಿಷ್ಟವಾಗಿ ನಡೆದು ಬಂದ ದಾರಿಗಳ ವಿಶ್ಲೇಷಣೆ ಮಾಡಿ ಒಂದು ಸಿಂಹಾವಲೋಕನವನ್ನು ಮಾಡುವುದೇ ನನ್ನ ಉದ್ದೇಶ.

ಉತ್ತರ ಕನ್ನಡದ ಆಧುನಿಕ ಕನ್ನಡ ಕಾವ್ಯ

"ನೆನೆವುದೆನ್ನ ಮನಂ ಬನವಾಸಿದೇಶಮಂ" ಎಂದು ಉತ್ತರಕನ್ನಡದ ಹಿರಿಮೆಯನ್ನು ಹಾಡಿದ ಆದಿಕವಿ ಪಂಪ ಮತ್ತು ಉತ್ತರಕನ್ನಡದ ಸೌಂದರ್ಯದ ಮಹಿಮೆಯನ್ನು ಮನದಣಿಯೆ ಕೊಂಡಾಡಿದ ಆಂಡಯ್ಯ—ಇವರಿಗೆ ಸ್ಫೂರ್ತಿ ಯಿತ್ತ ಈ ಉತ್ತರ ಕನ್ನಡ ಜಿಲ್ಲೆಯಲ್ಲಿ ಕನ್ನಡ ಕಾವ್ಯವಾಹಿನಿ ಹಿಂದೊಮ್ಮೆ ಅದ್ಭುತರಮ್ಯವಾಗಿ ಹರಿದಿತ್ತು. ಆದರೆ ದುರ್ದೈವ ವಶಾತ್ ಅದು ಅವ್ಯಾಹತವಾಗಿ ಹರಿಯಲಿಲ್ಲ. ಈ ಕವಿಗಳ ನಂತರ ನಮ್ಮ ಜಿಲ್ಲೆಯಲ್ಲಿ ಹೇಳಿಕೊಳ್ಳುವಂತಹ ಶ್ರೇಷ್ಠಕವಿ ಅನೇಕ ಶತಮಾನಗಳತನಕ ಹುಟ್ಟಲಿಲ್ಲ. ಈ ಕವಿಗಳು ಬಿತ್ತ ಇಲ್ಲಿಯ ಕಾವ್ಯಭೂಮಿ ಅನೇಕ ಕಾರಣಗಳಿಂದ ಅನೇಕ ಶತಮಾನ ಗಳತನಕ ಬರಡಾಯಿತು; "ನಂದನ ಬನ ಕೊರಡಾಯಿತು." ಕಾವ್ಯಕುಸುಮ ಕೇವಲ ಗಗನಕುಸುಮವಾಗಿತ್ತು. ಕಾವ್ಯಬೀಜದ ಮೊಳಕೆ ಒಡೆದು ಬೆಳೆದು ಪಕ್ವವಾಗಲು ಈ ಜಿಲ್ಲೆ ನವೋದಯದ ಕಾಲದತನಕ ದಾರಿಕಾಯಬೇಕಾಯಿತು. ನವೋದಯದ ಕಾಲ ದಲ್ಲಿ ಬಿ. ಎಂ. ಶ್ರೀ ಮತ್ತು ಬೇಂದ್ರೆಯವರು ಊದಿದ ಕಾವ್ಯದ ಕಹಳೆ ಕರ್ನಾಟಕದ ಮೂಲೆಮೂಲೆಗೂ ಮುಟ್ಟಿತು, ರಸಿಕರ ಮನ ತಟ್ಟಿತು, ಸಹಜವಾಗಿ ಅದು ಉತ್ತರ ಕನ್ನಡದ ಜನರನ್ನು ಬಡಿದೆಬ್ಬಿಸಿತು. ಅವರಿಂದ ಪ್ರಭಾವಿತರಾಗಿ ಅನೇಕ

ಹಿರಿಯ ತಲೆಮಾರಿನ ಕವಿಗಳಾದ ಪಾಂಡೇಶ್ವರ, ದಿನಕರ ದೇಸಾಯಿ, ಬಿ.ಎಚ್. ಶ್ರೀಧರ ಮೊದಲಾದವರು ಕವನಗಳನ್ನು ಬರೆಯ ತೊಡಗಿದರು. ಆದರೆ ಆಧುನಿಕ ಉತ್ತರ ಕನ್ನಡದ ಶಕ್ತಿಯುತವಾದ ವೈಶಿಷ್ಟಪೂರ್ಣವಾದ ಕಾವ್ಯದ ಜನನ ಮಹಾರಾಷ್ಟ್ರದ ಸಾಂಗಲಿಯಲ್ಲಿ ಆಯಿತು! ಇದು ಸೋಜಿಗವಾದರೂ ಸತ್ಯವಾದ ಸಂಗತಿ. ಡಾ. ಗೋಕಾಕರ ನೇತೃತ್ವ-ದಲ್ಲಿ ಸ್ಥಾಪಿತವಾದ "ವರುಣಕುಂಜದ" ತರುಣಹುಂಜರಾದ ಗಂಗಾಧರ ಚಿತ್ತಾಲ, ವಿ. ಜಿ. ಭಟ್ಟ ಮತ್ತು ಸು. ರಂ. ಎಕ್ಕುಂಡಿಯವರು ಉತ್ತರ ಕನ್ನಡದ ಉಜ್ವಲ ಕಾವ್ಯದ ಅರುಣೋದಯದ ಹರಿಕಾರರಾದರು. ಉತ್ತಮವಾದ ಪರಂಪರೆಯನ್ನು ನಿರ್ಮಿಸಿ ಅದಕ್ಕೆ ಭದ್ರಬುನಾದಿಯನ್ನು ಕಟ್ಟಿದರು. ಈ ರತ್ನತ್ರಯರು ಉತ್ತರ ಕನ್ನಡದ ಶ್ರೇಷ್ಠ ಕವಿಗಳು. ತಮ್ಮ ತಮ್ಮ ಕಾವ್ಯಮಾರ್ಗವನ್ನು ನಿರ್ದಿಷ್ಟವಾಗಿ ನಿಗದಿಪಡಿಸಿ ಉತ್ತರ ಕನ್ನಡದ ಸಾಹಿತ್ಯದೇವಿಯ ತೇರನ್ನು ಬಹುದೂರ ಎಳೆದವರಲ್ಲಿ ಅಗ್ರಗಣ್ಯರೆನ್ನಿಸಿಕೊಂಡರು.

ಗಂಗಾಧರ ಚಿತ್ತಾಲ : ಉತ್ತರ ಕನ್ನಡದ ಅತ್ಯಂತ ಮೇಧಾವಿ ಕವಿ ಎಂದರೆ ಚಿತ್ತಾಲರೆಂದು ಸಹಜವಾಗಿ ಎದೆತಟ್ಟಿ ಹೇಳಬಹುದು. ಪ್ರತಿಭಾವಂತ ವ್ಯಕ್ತಿತ್ವವುಳ್ಳ ಇವರು ತಮ್ಮ ಉಜ್ವಲ ಪ್ರತಿಭೆಯ ಪ್ರಭೆಯನ್ನು ಪರಿಣಾಮಕಾರಿಯಾಗಿ ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. "ಹರಿವ ನೀರಿದು" ಇಂತಹ ಕವನವನ್ನು ಕೇವಲ ಚಿತ್ತಾಲರಷ್ಟೇ ಬರೆಯಬಲ್ಲರು. "ಕಾಲದ ಕರೆ" "ಮನುಕುಲದ ಹಾಡು", "ಹರಿವ ನೀರಿದು" ಮತ್ತು

"ಸಂಪರ್ಕ" ಎಂಬ ನಾಲ್ಕು ಕೃತಿಗಳನ್ನು ಇವರು ಬರೆದಿದ್ದಾರೆ. "ಕಾಲದ ಕರೆ"ಯಲ್ಲಿ ಬರುವ ಸಿದ್ಧಶೈಲಿಯಲ್ಲಿ ಬರೆದ ಕವನಗಳು ನಿಸರ್ಗ ವರ್ಣನೆ, ಆವೇಶ, ಹಿಗ್ಗು, ಉಲ್ಲಾಸಗಳನ್ನು ಚಿತ್ರಿಸುತ್ತವೆ. ಪ್ರತಿಯೊಂದು ಕವನದಲ್ಲಿಯೂ ಪರಿಶುದ್ಧತೆ, ತಾಳಲಯಗಳು ಮನೆಮಾಡಿಕೊಂಡಿವೆ. ಸ್ವಾತಂತ್ರ್ಯಗೀತೆಗಳಲ್ಲಿ ರೊಚ್ಚಿದೆ; ಕಾವ್ಯದ ಕೆಚ್ಚಿದೆ. ಆದರೆ "ಮನುಕುಲದ ಹಾಡು" ಇವರ ಕಾವ್ಯದ ಇತಿಹಾಸದಲ್ಲಿ ಹೊಸ ಮನ್ವಂತರವನ್ನೇ ತೆರೆಯಿತು. ಈ ಎರಡೂ ಕವನಸಂಕಲನಗಳಲ್ಲಿ ಅಜಗಜಾಂತರವಿದೆ. ವಾಮನ ಇಲ್ಲಿ ತ್ರಿವಿಕ್ರಮನಾಗಿದ್ದಾನೆ. ಬಹುತೇಕ ಗುರು ಗೋಕಾಕರಂತೆ ಸ್ವಚ್ಛಂದ ಛಂದದಲ್ಲಿ ಬರೆದ ಈ ಕವನಗಳು ಇವರ ಪ್ರೌಢಿಮೆಯ, ಪ್ರಾಗಲ್ಭತೆಯ ಪರಿಪಕ್ವ ಫಲಗಳು. ಇಲ್ಲಿ ಚಿಂತನಶೀಲತೆಯಿಂದ ತಮ್ಮ ಅನುಭವಗಳ ನಿರೂಪಣೆಯನ್ನು ಇವರು ಪ್ರಾಮಾಣಿಕವಾಗಿ ಚಿತ್ರಿಸಿದ್ದಾರೆ. "ಐನು ಸಮುದ್ರ ಗೀತಗಳು" "ಸೂರ್ಯಗೀತ"ಗಳು ಕವಿಯ ಅನುಭವವನ್ನೂ ನಿಸರ್ಗ ಸೌಂದರ್ಯವನ್ನೂ ವರ್ಣಿಸುತ್ತವೆ. ಇಲ್ಲಿ ಬರುವ ಕವನಗಳಲ್ಲಿ "ಖುಷಿ", ದಾಂಪತ್ಯಪ್ರೇಮ, ಸಾಮಾಜಿಕ ಸ್ಥಿತ್ಯಂತರಗಳು ನಾದಮಾಧುರ್ಯದೊಂದಿಗೆ, ಹೊಸ ತಾಳಲಯಗಳ ಗತ್ತಿನಿಂದ ಗಮ್ಮತ್ತಿನಿಂದ, ನೂತನ ಪ್ರತಿಮೆಗಳ ಮೂಲಕ ಚಿತ್ರಿಸುತ್ತವೆ. ಇಲ್ಲಿ ಬರುವ ಅಪ್ರತಿಮ ಪ್ರತಿಮೆಗಳು ಕಣ್ಣು ಕುಕ್ಕಿಸುವಂತಹವು. ಇವು ಯಾರನ್ನೂ ಬೆರಗುಗೊಳಿಸದೇ ಇರಲಾರವು. ಮನವೊತ್ತುವ ಪ್ರತಿಮೆಗಳ ಸೌಧಗಳನ್ನು ಚಿತ್ತಾಲರು ಸಹಜವಾಗಿ ಕಟ್ಟಬಲ್ಲರು ಎಂಬುದಕ್ಕೆ ಇಲ್ಲಿಯ ಕವನಗಳೇ ಸಾಕ್ಷಿ. ಈ ಕವನ ಸಂಗ್ರಹದಲ್ಲಿಯ "ದುಃಖಗೀತ" ಎಲ್ಲ ಕವನಗಳಿಗೂ ಕಳಸವಿಟ್ಟಂ

ತಿದೆ. ಇದು ಕನ್ನಡದಲ್ಲಿಯೇ ಒಂದು ಶ್ರೇಷ್ಠಕವನ. ಚರಮ ಗೀತೆಗಳನ್ನು ಹೃದಯ ಸ್ಪರ್ಶಿಯಾಗಿ ಬರೆಯುವದರಲ್ಲಿ ಚಿತ್ತಾಲರು ನಿಪುಣರು. "ದುಃಖಗೀತ"ವು ಕಾವ್ಯದ ಕೆಚ್ಚಿನಿಂದ, ನಾಟಕೀಯತೆ, ಉದ್ವಿಗ್ನತೆ, ತಾತ್ವಿಕ ಚಿಂತನೆಗಳಿಂದ, ಸಂಕೇತ ಪ್ರತಿಮಾ ಸಂವಿಧಾನಗಳಿಂದ, ಆಶಯದ ಅಸಂಭವದ ಔನ್ನತ್ಯದ ಅಭಿವ್ಯಕ್ತಿಯಿಂದ, ಪರಿಚ್ಛೇದಗಳ ಸಂಗೀತ ಅನುಬಂಧದಿಂದ ಉದ್ದಾಮವಾಗಿ ಹರಿಯುವ ವಾಗ್ಮಿತೆ (Rhetoric)ಯಿಂದ, ಅರಳಿದೆ. ಈ ಕವನ ಕನ್ನಡದಲ್ಲಿಯೇ ಒಂದು ಶ್ರೇಷ್ಠ ಕವನ. ಮಾನವತಾವಾದ ಇವರ ಕವನಗಳಲ್ಲಿ ವ್ಯಾಪಿಸಿಕೊಂಡಿದೆ. ಇವರ ಕಾವ್ಯಶೈಲಿಯನ್ನು ಅರಿತುಕೊಳ್ಳಲು ಅಪ್ರತಿಮ ಪ್ರತಿಮೆಗಳನ್ನು ಮೆಲುಕು ಹಾಕುವದು ಒಳ್ಳೆಯದು.

ಉದಾ:__

೧) ನೀರಧ್ಯಾನವನೊಡೆದು ತೇಲಿ ಬರುತ್ತಿತ್ತು ನೆಲ.

೨) ಉದ್ದಂಡ ಮರಳಿನ ದಂಡೆ
ನೀರಡಿಸಿ ತೇಕಿತ್ತು ಒಣನಾಲಗೆಯ ಚಾಚಿ.

೩) ಮನದ ಹೊಲಗಳಲ್ಲೆಲ್ಲ ಗೋಳಿಡುವ ಗೊಣ್ಮರಿದ
ಗೋಧಿ, ಜೋಳ.

೪) ಕಲ್ಪಾಂತ ಜಲವೆ ನವಖಂಡ ಪೃಥ್ವಿಯ ನುಂಗಿ.
ನೊರೆಯುವೊಲು
ಮುಗಿಲಿಗೂ ತೆರೆ ಹಾಯ್ಸಿ ಹರಿಹಾಯ್ವ ನೀರು!

"ಸೂರ್ಯ ಗೀತ"ದಲ್ಲಿ ಒಂದರ ಮೇಲೊಂದು ಪ್ರತಿಮೆಗಳು ಸಮರ್ಥವಾಗಿ ಬಂದಿವೆ. ಹಿಮಪಾತದ ವರ್ಣನೆಯಲ್ಲಿ ಬರುವ

ಅನೇಕ ಪ್ರತಿಮೆಗಳನ್ನು ಓದಿ ಮನಸ್ಸಿನ ಮುಂದೆ ಕಲ್ಪಿಸಿ ಅನುಭವಿಸಿದಾಗಲೇ ಅದರ ಆನಂದ ಗೊತಾಗುತ್ತದೆ. "ಗಾಜು ಬೋಗಣಿಯಲ್ಲಿ ನೀರು ತುಂಬಿದವೊಲು ನಿರಭ್ರ ಬೆಳಕು". ಅಥವಾ "ಧತ್ತೂರಿ ಹೂವಂತೆ ಬೆಳೆದು ನಿಂತಿದೆ ಹಗಲು" ಅಥವಾ

ಹೊಸ್ತಿಲಾಚೆಗೆ ರಾಶಿ ರಾಶಿ ಮಲ್ಲಿಗೆ ಸೇಸೆ.
ಕಬ್ಬಿಣದ ಕಂಬಿಗೂ ಕುಸುಮ ಭಾರವು ಸೂಸೆ,
ಅಂಗಳದಿ ಎಂಥ ನಕ್ಷತ್ರಪಾತ
ಬೇಲಿಯಲು ಅಕಾಲ ಕುಸುಮವ್ರಾತ"

ಇಂತಹ ನೂರಾರು ಪ್ರತಿಮೆಗಳ ಉದಾಹರಣೆಗಳನ್ನು ಕೊಡಬಹುದು. ಇಂತಹ ಪ್ರತಿಮೆಗಳನ್ನು ಕಲ್ಪಿಸಲು ಕಟ್ಟಲು ಕಲೋಪಾಸಕ ಕವಿಗೆ ಕಲ್ಪನಾವಿಲಾಸ ಬೇಕು; ದಿವ್ಯದೃಷ್ಟಿ ಬೇಕು. ಇವೆಲ್ಲ ಶಕ್ತಿಗಳು ಚಿತ್ತಾಲರಲ್ಲಿ ಅಧಿಕ ಪ್ರಮಾಣದಲ್ಲಿವೆ ಯೆಂದು ಬೇರೆ ಹೇಳಬೇಕೇ ?

ಉತ್ತಮ ಕಾವ್ಯರಚನೆಗೆ ಬೇಕಾದ ಜೀವನವಿಕಾಸ ದಿವ್ಯ ದೃಷ್ಟಿ,ಕಲ್ಪನಾವಿಲಾಸ, ಅನುಭವದ ಆಳ, ಆಳವಾದ ಅಭ್ಯಾಸ, ಅಭ್ಯಾಸದಿಂದ ಬರುವ ಕಾವ್ಯಶೈಲಿಯ ಹದ-ಈ ಎಲ್ಲ ಶಕ್ತಿಗಳು ಇವರ ಮೂರನೆಯ ಸಂಕಲನವಾದ "ಹರಿವ ನೀರಿದು "ಗ್ರಂಥ ದಲ್ಲಿ ಸ್ಫುಟವಾಗಿ ಬರುತ್ತವೆ. ಕವಿಯ ಕಾವ್ಯ ಇಲ್ಲಿ ಪರಾಕಾಷ್ಠೆ ಯನ್ನು ಮುಟ್ಟಿದೆ. "ಹರಿವ ನೀರಿದು" ಎಂಬ ಕವನ Words worth ನ "Ode to Intimations of Immortality"

ಮತ್ತು T. S. Eliot ನ "Four Quartets" ಗಳಿಂದ ಸ್ಫೂರ್ತಿ ಪಡೆದು ಬರೆದ ಕವನ. ಯು. ಆರ್. ಅನಂತಮೂರ್ತಿ ಯವರ ಮಾತಿನಲ್ಲಿ ಹೇಳುವದಾದರೆ "ಜೀವನಾನುಭವವನ್ನು ತಾತ್ವಿಕ ವಿಚಾರದ ಮಟ್ಟದಲ್ಲೂ ಪರೀಕ್ಷಿಸಿ ದಾರ್ಶನಿಕವಾಗಿ ಒಡಮೂಡಿಸುವ ಪ್ರಯತ್ನ ಇಲ್ಲಿದೆ."ಕವಿ, ಕಾಲ ಮತ್ತು ಜೀವ ನವನ್ನು ಹರಿವ ನೀರೆಂದು ಕರೆಯುತ್ತಾನೆ. "ಜೀವನ ಕೇವಲ ಪ್ರವಾಹವಲ್ಲ. ಪ್ರತಿಕ್ಷಣವೂ ಕ್ಷಣಿಕತೆಯನ್ನೂ ಶಾಶ್ವತತೆಯನ್ನೂ ಒಟ್ಟಾಗಿ ಗರ್ಭಿಸಿಕೊಂಡ ಮುಹೂರ್ತ." ಮನುಷ್ಯನಿಗೆ ಹೋರಾಟ ತಪ್ಪಿದ್ದಲ್ಲ. ಜೀವನದ ಅರ್ಥವೇನು ಎಂಬುದನ್ನು ತಿಳಿಯುವ ಕವಿಯ ಜಿಜ್ಞಾಸೆ,ಅನ್ವೇಷಣೆ, ಸತ್ಯಶೋಧನೆ ಇಲ್ಲಿದೆ. ಮೃತ್ಯುಪ್ರಜ್ಞೆ ಕವಿಯನ್ನು ಕವಿದು ಕಾಡಿದರೂ ಕವಿ ಕಂಗೆಡದೆ ಆಶಾವಾದಿಯಾಗಿ.

"ಈ ಮಹಾದ್ಭುತದಿ ಉದ್ಭವಿಸಿ ಬಂದಿಹೆವಲ್ಲ
ಅದೇ ಒಂದು ಹಿಗ್ಗು ಎಚ್ಚತ್ತು ನಿಂತಿಹೆವಲ್ಲ
ಅದೇ ಒಂದು ನೆತ್ತರಲಿ ದಿನರಾತ್ರಿ ಹರಿವ ಸುಖ."

ಎಂದು ಉದ್ಗರಿಸುತ್ತಾನೆ. "ಕಣ್ಣು" ಎಂಬ ಕವನದಲ್ಲಿ "ಕಣ್ಣಲ್ಲಿ ಏನಿಲ್ಲ! ಎಂಬುದನ್ನು ಸುದೀರ್ಘವಾಗಿ ಚರ್ಚಿಸಿ, ಕಣ್ಣಿನ ಸಾಧ ನೆಗಳನ್ನೂ, ಅದಿಲ್ಲದಿದ್ದರೆ ಆಗುವ ಅನೇಕ ಅಂಧತೆ ಅನಾಹುತ ಗಳನ್ನೂ ಹಿಂಜಿ ಹಿಂಜಿ ನಿರೂಪಿಸಲಾಗಿದೆ. ಈ ರೀತಿ ಬರೆಯುವ ಕವಿಗಳು ವಿರಳವೆಂದು ಹೇಳಲೇಬೇಕು. "ಕಾಮಸೂತ್ರ" ಎಂಬ ಕೆರಳಿಸುವ ಕವನದಲ್ಲಿ ಕಾಮದ ವಿಚಾರ, ಗಂಡು-ಹೆಣ್ಣಿನ ಸಮಾಗಮದ ವಿವರಗಳು ವಿಶದವಾಗಿ ವಿಸ್ತಾರವಾಗಿ ಬಂದರೂ

ಅಶ್ಲೀಲತೆಗೆ ಎಲ್ಲಿಯೂ ಎಡೆಯಿಲ್ಲ. ಇದೂ ಸಹ ಚಿತ್ತಾಲರ ಅನನ್ಯ ಸಾಧನೆ. "ಅಣ್ಣ" "ಸುಧೀರ" "ತಾಯಿ" ಮುಂತಾದ ಚರಮಗೀತೆಗಳಲ್ಲಿ ಉಮ್ಮಳಿಸಿ ಬರುವ ದುಃಖೋದ್ವೇಗ, ಚಿಂತನಶೀಲತೆ, ಪ್ರತಿಮೆ ಹಾಗೂ ಸಂಕೇತಗಳು, ಮೃತ್ಯುವಿನ ಗೂಢ ರಹಸ್ಯಗಳು ಚೆನ್ನಾಗಿ ಚಿತ್ರಿತವಾಗಿವೆ.

ಇವರ ನಾಲ್ಕನೆಯ ಕವನ ಸಂಗ್ರಹವಾದ "ಸಂಪರ್ಕ"ದಲ್ಲಿ "ಹರಿವ ನೀರಿದು" ಮತ್ತು "ಮನುಕುಲದ ಹಾಡು"ಗಳಲ್ಲಿ ಬರುವ ಜ್ವಾಜ್ವಲ್ಯಮಾನವಾದ ಪ್ರತಿಮೆಗಳು ಇಲ್ಲಿ ಅಷ್ಟೊಂದು ಕಂಡು ಬರದಿದ್ದರೂ ಈ ಪ್ರತಿಮೆಗಳು ಜೀವಂತವಾಗಿವೆ. ಇತ್ತೀಚಿನ ಇವರ ಈ ಕೃತಿಯನ್ನು ಅವಲೋಕಿಸುವಾಗ, ಗುಣವಾಗದ ಭೀಕರ ವ್ಯಾಧಿಯಿಂದ ಕವಿ ಬಳಲುತ್ತಿರುವ ಹಿನ್ನೆಲೆಯನ್ನು ನಾವು ಲಕ್ಷ್ಯದಲ್ಲಿಟ್ಟು ಕೊಳ್ಳಬೇಕು.

ಕನ್ನಡದಲ್ಲಿಯೇ ಅತಿ ವಿಶಿಷ್ಟ ಕವನವಾದ ಇವರ "ದುಃಖ ಗೀತ"ದಲ್ಲಿ ಕವಿ ತಾದಾತ್ಮ್ಯ ಹೊಂದಿ, ತಂದೆಯ ವ್ಯಾಧಿ ಹಾಗೂ ಅವರು ಈ ಅಸಹ್ಯ ಬವಣೆಯಿಂದ ಪಾರಾಗಲು ಕಂಡುಕೊಂಡ ಹಾದಿ–ಆತ್ಮಹತ್ಯೆ, ಬದುಕು–ಸಾವುಗಳ ನಿಗೂಢ ಸಂಬಂಧ–ಇವುಗಳ ಕುರಿತು ಮನೋವೇಧಕವಾಗಿ ಬರೆದಿದ್ದರು. ಈಗ ಯೌವನದಲ್ಲಿಯೇ ಇವರಿಗೂ ಗುಣವಾಗದ ವ್ಯಾಧಿ ಕಾಡುತ್ತಿದೆ; ಹಿಂಸ್ರಪಶುವಿನಂತೆ ತೊತ್ತಳದುಳಿದು ತೊಳಲಾಡಿಸುತ್ತಿವೆ. ತಂದೆಯ ಕುರಿತು ಬರೆದ ಚರಿತ್ರಗೀತ ಆತ್ಮಚರಿತ್ರ ಗೀತವಾಗಬಹುದೆಂದು ಕವಿ ಕನಸು ಮನಸ್ಸಿನಲ್ಲಿಯೂ ಎಣಿಸಿರಲಿಲ್ಲ. ಆದರೆ ಯಾವ ಜನ್ಮದ ಶಾಪವೋ, ಈ ವ್ಯಾಧಿ

ಕವಿಯನ್ನು ಸಂಪೂರ್ಣವಾಗಿ ಸದೆಬಡಿದಿವೆ; ಕವಿಯ ಸುಂದರ-ವಾದ ದೇಹದಾರ್ಢ್ಯವನ್ನು ನಾಶಮಾಡಿವೆ. ಕವಿ ಕ್ರೂರ ವಿಧಿಯಾಟಕ್ಕೆ ಬಲಿಯಾಗಿ, ಬಾಗಿ, ಸೋತು ಸುಣ್ಣವಾಗಿದ್ದಾನೆ. ಹಿಂದೆ ತಂದೆ ತೀರಿಕೊಂಡಾಗ ಅನುಭವಿಸಿದ ದುಃಖ ಈಗ ಕವಿಗೆ ನಿತ್ಯದ ಪರಿಪಾಠವಾಗಿದೆ; ಜೀವನದ ನಿಯಮವಾಗಿದೆ. ಇಂತಹ ದುರ್ಧರ ಪ್ರಸಂಗದಲ್ಲಿ ತನ್ನ ತಾಳಲಾರದ ನೋವನ್ನು ವರ್ಣಿಸುವ ಕವನಗಳನ್ನು ಚಿತ್ತಾಲರು ಬರೆದದ್ದರಲ್ಲಿ ಆಶ್ಚರ್ಯವೇನಿಲ್ಲ. ಹೆಜ್ಜೆ ಹೆಜ್ಜೆಗೆ ಬೇಟೆಗಾರನ (ಯಮನ) ಹೆಜ್ಜೆಯ ಸದ್ದು ಕೇಳುವ ಮನುಷ್ಯ ಮತ್ತೇನು ತಾನೇ ಮಾಡಬಲ್ಲ? ಆದ್ದರಿಂದ ಈ ಸಂಗ್ರಹದಲ್ಲಿಯ ಹೆಚ್ಚಿನ ಕವಿತೆಗಳ ವಿಷಯ ದುಃಖ ದುಗುಡಗಳ, ಕಷ್ಟ-ಸಂಕಷ್ಟಗಳ ಸರಮಾಲೆಯಾಗಿವೆ. ನೋವಿನ ಕರಾಳಛಾಯೆ ಅನೇಕ ಕವನಗಳಲ್ಲಿ ಮುಸುಕಿದೆ.

ನಂಜು ತುಂಬಿದ, ಮಂಜು ಮುಸುಕಿದ ಈ ಬಾಳಿನ ದಾರಿಯಲ್ಲಿಯೂ ಚಿತ್ತಾಲರು ಧೈರ್ಯದ ಪಂಜು ಹಿಡಿದು ಸಾಗುತ್ತಿದ್ದಾರೆ. ಎಂದೆಂದಿಗೂ ಆಶಾವಾದ ಪ್ರಕಟಿಸಿದ ಇವರು ತಮ್ಮ ಧೀರೋದಾತ್ತ ಗುಣಗಳನ್ನು ಕೈ ಬಿಡುವದಿಲ್ಲ. "ಸಂಪರ್ಕ" ಕವನದಲ್ಲಿ ಬರುವ ಧಾನ್ಯಾಂಕುರಗಳು ಚಿತ್ತಾಲರ ಆಶಾವಾದವನ್ನು ಸಾಂಕೇತಿಕವಾಗಿ ಅಷ್ಟೆ ಸಮರ್ಥವಾಗಿ ಪ್ರಕಟಿಸುತ್ತವೆ. ಜೀವನದಲ್ಲಿ ವ್ಯಾಧಿಯ ನಿಮಿತ್ತದಿಂದ ಹಾಲಾಹಲವನ್ನೇ ಉಂಡರೂ ಅದನ್ನು ಮಾನಸಿಕವಾಗಿ ದಕ್ಕಿಸಬಲ್ಲ ನೀಲಕಂಠರಿವರು. ಬಾಳಕುಲಿಮೆಯಲ್ಲಿ ದಗ್ಧವಾದ ಈ ಜೀವ-ದಲ್ಲಿಯೂ ಮುಗ್ಧಹಾಸವಿದೆ, ವಿದಗ್ಧಭಾವವಿದೆ. ವ್ಯಾಧಿಯ

ನೆರಳಿನಲ್ಲಿಯೂ ಬರೆದ ಈ ಕವನಗಳಲ್ಲಿ ಚಿತ್ತಾಲರು ತಮ್ಮ ಕಾಳಜೀ ಪೂರ್ವಕವಾದ ನಿಪುಣ "ಕಾವ್ಯೋದ್ಯೋಗ" ವನ್ನು ಕಾಪಾಡಿಕೊಂಡು ಬಂದಿರುವದು ಶ್ಲಾಘನೀಯು. ಕವಿಯು ಶಬ್ದ ಶಕ್ತಿಯು ಹಿಡಿತ ಅನುಭವದ ತುಡಿತ ಹಾಗೂ ಮಿಡಿತಗಳನ್ನು ಅವುಗಳ (ಶಬ್ದಗಳ) ಚಮತ್ಕಾರದೊಂದಿಗೆ ಜೀವಂತವಾದ ಸಂವೇದನೆಯು ಚಿತ್ರವನ್ನು ಈ ಕೆಳಗಿನ ಪರಿಚ್ಛೇದದಲ್ಲಿ ಕಾಣ ಬಹುದು.

ಯಾವರ್ಥಪೂರ್ಣ ಸಂಕೇತಗಳ ಯೋಜಿಸಲಿ
ಈ ಅನರ್ಥವ ಮೂರ್ತಗೊಳಿಸೆ.
ಯಾವ ಸಮರ್ಥ ಪ್ರತಿಮಾವಿಧಾನ ?
ಮಾತು ಸಾಲದು ಇಲ್ಲಿ ನಾಲಗೆಯು
ಸೋಲುತ ಬಂತು
ಬದುಕಾಗುತಿದೆ ಅರ್ಥಹೀನ (ವ್ಯಾಧಿ)

ಚಿತ್ತಾಲರು ಹಿಂದೆ ಬರೆವ "ಋಷಿ" "ಸಮುದ್ರಗೀತ" ಗಳಲ್ಲಿ ಪರಿಶುದ್ಧವಾದ ಆನಂದ ಅಭಿವ್ಯಕ್ತಿಯಾಗಿದ್ದರೆ "ವ್ಯಾಧಿ" "ಆಘಾತ" ಗಳಲ್ಲಿ ಗಾಢವಿಷಾದ ವ್ಯಕ್ತವಾಗಿದೆ. ಇವರು ಕೇವಲ ಡೊಂಬರಾಟವಾಡಿ, ಶಬ್ದಜಾಲನೆಯ್ದು, ಎಸೆದು ಜನರನ್ನು ಎಂದಿಗೂ ಮರುಳುಮಾಡುವದಿಲ್ಲ. ಆನಂದವಿರಲಿ, ದುಃಖವಿರಲಿ ಅದು ಇವರ ಅನುಭವದ ಆಳದಿಂದ ಪುಟಿದು ಬರುವ ಜೀವಂತಕಾವ್ಯದ ಚಿಲುಮೆಯಾಗಿದೆ. ಅನುಭವದ ಅಲುಗನ್ನು ಹೃದಯು ಕಲಶದಲ್ಲಿ ಅದ್ದಿ ಬರೆಯುವ ರೀತಿ ಇವ–ರಿಗೆ ಸಾಧಿಸಿದೆ. ಗ್ರಾಂಥಿಕ ಭಾಷೆಯೊಂದಿಗೆ ಅವಶ್ಯವಿದ್ದಲ್ಲಿ

ಆಡುನುಡಿಗಳ ಲಯವನ್ನು ಹೊಸೆದಿದ್ದಾರೆ. ಮುಖ್ಯವಾಗಿ ಇವರ ಶೈಲಿಯಲ್ಲಿ ಕಾಣುವದು ಸಮುದ್ರದ ಗಂಭೀರ ಉದ್ಘೋಷ. ಸ್ವಚ್ಛಂದ ಶೈಲಿಯಲ್ಲಿ ಬರೆದರೂ ರಸ ಸಂಪ್ರದಾಯದ ಭಾಷೆಯನ್ನು ತಿರಸ್ಕರಿಸದ ಮನೋವೃತ್ತಿಯಿರುವದರಿಂದ ಮಾಂತ್ರಿಕತೆ, ಮೋಹಕತೆ, ಮಾತಿನ ಸೊಗಸು, ಜೀವನಾನುಭವವನ್ನು ನೇರವಾಗಿ ಕಾವ್ಯಮಯವಾಗಿ ಆವೇಶದ ವಾಗ್ಝರಣೆಯಲ್ಲಿ ನಿರೂಪಿಸುವ ಕೌಶಲ್ಯ ಈ ಎಲ್ಲ ಕಾರಣಗಳಿಂದ, ಅನನ್ಯ ಪ್ರತಿಭೆಯಿಂದ ತಮ್ಮದೇ ಆದ ಸ್ಥಾನದಿಂದ ಬೆಟ್ಟದ ಮೇಲಿನ ಸಿಂಹದಂತೆ ಈಕವಿರಾಜ ಗರ್ಜಿಸುತ್ತಿದ್ದಾನೆ. ಇವರು ಎಂತಹ ಕಾವ್ಯ ಬರೆದಿದ್ದಾರೆಂಬುದನ್ನು ಅವರ ಮಾತಿನಲ್ಲೇ ಹೀಗೆ ಹೇಳಬಹುದು.

"ಇಂಥಹಾಡನ್ನು ಹಾಡಬೇಕಲ್ಲ, ಅದ ಕೇಳಿ
ದಂಥ ಜಗ ತಿವಿದಂತೆ ಎದ್ದು ಕುಳ್ಳಿರ ಬೇಕು.
ಮತ್ತೆ ಕೇಳಿರಬೇಕು
"ಇದು ಎಂಥ ಹಾಡು ?"

ಸು. ರಂ. ಎಕ್ಕುಂಡಿ : ಚಿತ್ತಾಲರು ನವ್ಯಕಾವ್ಯದಿಂದ ಪ್ರೇರಿತರಾಗಿ ತಮ್ಮ ಕಾವ್ಯಮಾರ್ಗವನ್ನು ಬದಲಿಸಿಕೊಂಡು, ಬೆಳೆಯಿಸಿಕೊಂಡು, ತಮ್ಮದೇ ಆದ ಹೊಸ ಕಾವ್ಯಶೈಲಿಯನ್ನು ರಚಿಸಿಕೊಂಡು ಸತ್ವಯುತವಾದ ಕಾವ್ಯ ನೀಡಿದರೆ, ಎಕ್ಕುಂಡಿಯವರು ನವ್ಯಕಾವ್ಯದ "ಮಿಸುನಿ ಜಿಂಕೆ"ಯನ್ನು ಬೆಂಬತ್ತಿ ಹೋಗಲಿಲ್ಲ. ರಸ ಸಂಪ್ರದಾಯದ ಹಾದರಿಯಲ್ಲಿಯೇ ಕಾವ್ಯವನ್ನು ಬರೆದರು, ಬರೆಯುತ್ತಲೇ ಇದ್ದಾರೆ. ಇವರು ತಮ್ಮ

ಕಾವ್ಯದಲ್ಲಿ ಬುದ್ಧಿಶಕ್ತಿಗಿಂತ ಮಿಗಿಲಾಗಿ ಹೃದಯಕ್ಕೆ, ಅಂತಃ-ಕರಣಕ್ಕೆ ಮಹತ್ವವನ್ನು ನೀಡಿ, ತಮ್ಮ ಜೀವನಾನುಭವದ ರಸಾನುಭವವನ್ನು ರಸಿಕರ ಅಂತಃಕರಣ ತಟ್ಟುವಂತೆ ಬರೆದಿ-ದ್ದಾರೆ. ಎಕ್ಕುಂಡಿಯವರು ಕಾವ್ಯಕ್ಷೇತ್ರದಲ್ಲಿ ಪದಾರ್ಪಣೆ ಮಾಡಿ ರಸಿಕರ ಮನ ಮತ್ತು ಗಮನ ಸೆಳೆದದ್ದು ತಮ್ಮ ಕಥನಕವನಗಳ ಮೂಲಕ. ಇವರು ಬರೆಯುವ ಮುಂಚೆ ಮಾಸ್ತಿ ಮತ್ತು ಕುವೆಂಪು ಕಥನ ಕವನಗಳನ್ನು ಬರೆಯುತ್ತಿದ್ದರು. ಈ ಶ್ರೇಷ್ಠ ಕವಿದ್ವಯರು ಬರೆಯುತ್ತಿದ್ದ ಈ ಪ್ರಕಾರದಲ್ಲಿ ಯಶಸ್ವಿಯಾಗಿ ಬರೆಯುವ ಎದೆಗಾರಿಕೆ ಯಾರಿಗೂ ಇದ್ದಿಲ್ಲ. ಇಂತಹ ಪರಿಸ್ಥಿತಿ-ಯಲ್ಲಿ ಎಕ್ಕುಂಡಿಯವರು ತಮ್ಮದೇ ಆದ ಶೈಲಿಯಲ್ಲಿ ಅವನ್ನು ಯಶಸ್ವಿಯಾಗಿ ಬರೆದು ಕನ್ನಡ ಕಾವ್ಯಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡರು; ರಸಿಕರ ಹೃದಯಗಳನ್ನು ಸೂರೆಗೊಂಡರು. ಅಂದಿನಿಂದ ಈಗಲೂ ಇವರು ಕಥನ ಕವನ ಗಳನ್ನು ಬರೆಯುತ್ತಲೇ ಇದ್ದಾರೆ. ಇವುಗಳನ್ನು ಬರೆಯುವದ-ರಲ್ಲಿ ಎಕ್ಕುಂಡಿಯವರದು ಎತ್ತಿದ ಕೈ. ಉಳಿದ ಅನೇಕರು ಕೈ ಎತ್ತಿದ್ದಾರೆ ಅಷ್ಟೇ. "ಶ್ರೀ ಆನಂದತೀರ್ಥರು" "ಸಂತಾನ" "ಹಾವಾಡಿಗರ ಹುಡುಗ" "ಮತ್ಸ್ಯಗಂಧಿ" ಮತ್ತು "ಬೆಳಕ್ಕಿ-ಗಳು" ಇವರ ಮಹತ್ವಪೂರ್ಣ ಕವನ ಸಂಗ್ರಹಗಳು.

ಇಂಗ್ಲೀಷ ಸಾಹಿತ್ಯದಲ್ಲಿಯ ಕಥನ ಕವನಗಳು, ಹಾಗೂ Balladಗಳಿಂದ ಪ್ರಭಾವಿತರಾಗಿ, ರಾಮಾಯಣ, ಮಹಾಭಾರತ, ಭಾಗವತಗಳಿಂದ ಸ್ಫೂರ್ತಿ ಪಡೆದ ಎಕ್ಕುಂಡಿಯವರು ತಮ್ಮದೇ ಆದ ನಿರ್ದಿಷ್ಟ ಮಾರ್ಗವನ್ನು ಖಚಿತ ಪಡಿಸಿಕೊಂಡಿದ್ದಾರೆ.

ಇವರ ಕಥನ ಕವನಗಳಲ್ಲಿಯು ಕಥಾವಸ್ತು ಬಹಳ ಚಿಕ್ಕದು. ಆದರೆ ಅದರ ನಿರೂಪಣೆ ಅದ್ಭುತವಾದದ್ದು. ಕೆಲಸಲ ಕೆಲವೊಂದು ಸಾಲುಗಳನ್ನು ಪಲ್ಲದಂತೆ ಅವರು ಪುನರಪಿ ಹೇಳುವದರಿಂದ ಆಗುವ ಪರಿಣಾಮ ಅಮೋಘವಾದುದು. ಈ ಪುನರುಕ್ತಿಗಳು ಕವನದ ತಿರುಳನ್ನು ಒತ್ತಿ ಹೇಳುವವಲ್ಲದೆ, ತಮ್ಮ ಸುಗೀತಮಯತೆಯಿಂದ ಹೊಸದೊಂದು ಕನಸಿನ ಸಾಮ್ರಾಜ್ಯವನ್ನೇ ತೆರೆದು ನೂತನ ಅಲೌಕಿಕವಾದ ವಾತಾವರಣವನ್ನು ಕಲ್ಪಿಸುತ್ತವೆ.

ಉದಾ :—

೧) ಹಕ್ಕಿಯಂತೆ ಕಿಲಕಿಲಸೆ ನಕ್ಕರೋ ದಂಡೆಗೋಡಿ ಬಂದು.
(ಅವಧೂತ)

೨) ಕಾಲಕೆಳಗೆ ನೆಲ ಓಡುತಿತ್ತು. ನಭ ನೋಡುತಿತ್ತು ಮೇಲೆ
ಹೊಯ್ದು ಮಿಸುನಿಬಲೆ ಮಿಸುನಿ ಜಿಂಕೆಗಾಗಿತ್ತು
ಕೊರಳಮಾಲೆ (ಮಿಸುನಿಜಿಂಕೆ)

೩) ನರನಾರಾಯಣ ಯಮಳರು ಕುಳಿತರು ಅಶ್ವತ್ಥದ
ಮಾರದಡಿಯಲ್ಲಿ
ನರಕುಲ ನಾರಾಯಣ ಕುಲವಾಗಲಿ ಹಿರಣ್ಯಗರ್ಭದ
ಗುಡಿಯಲ್ಲಿ (ಊರ್ವಶೀ)

೪) ಜೀವತುಂಬಿ ತುಳುಕಿರಲಿ ದೇವಕರುಣೆ.
ನಾದಲೋಲ ಗೋಪಾಲಕೃಷ್ಣ ಸ್ಮರಣೆ. (ಅವತಾರ)

ಇಂತಹ ಸಾಲುಗಳು ಕಾವ್ಯದ ಕಂಪನ್ನೂ ಸಂಗೀತದ ಇಂಪನ್ನೂ ವಾಚಕರಿಗೆ ಕೊಡುತ್ತವೆ. ಇವರ ಕಥನ ಕವನಗಳಲ್ಲಿ ಇದ್ದ

ನಾದಮಯತೆಯನ್ನು ಮೆಚ್ಚಿ ಪು. ತಿ. ನ. ಅವರು ಎಕ್ಕುಂಡಿ-ಯವರನ್ನು ನಾದಲೋಲ ಕವಿ ಎಂದು ಕರೆದದ್ದು ಅಕ್ಷರಶಃ ಸತ್ಯವಾದ ಮಾತಾಗಿದೆ.

ಈ ನಾದಮಯತೆ ಇವರ ವರ್ಣನಾವೈಖರಿಯ ಒಂದು ಅಂಶ. ಕೀಟ್ಸ ಹಾಗೂ Pre-Raphelite ಕವಿಗಳ ಪ್ರಭಾವ-ದಿಂದಾಗಿ ಬಹುತೇಕ ಎಲ್ಲ ಕವನಗಳಲ್ಲಿಯೂ ಕವಿಯ ಸೌಂದರ್ಯಾರಾಧನೆ ಮೈವೆತ್ತು ಬಂದಿದೆ. ಕವಿಗೆ ಪ್ರಕೃತಿ ಸೌಂದರ್ಯದ ಮೇಲಿದ್ದ ಮಮತೆ ಅಪಾರ. ಈ ಪ್ರಕೃತಿಯನ್ನು ಕುರಿತು ಒಂದೆರಡು ಪದಪುಂಜಗಳಿಂದ ಇವರು ಸಹಜವಾಗಿ ಒಂದು ಚಿತ್ರವನ್ನೇ ನಿರ್ಮಿಸಬಲ್ಲರು.

ಉದಾ :

೧) ಹೊಂಬೆಳಗಿನ ರಸಲೇಪನ ಚೆಲುವಿಗೆ ನೆಲಮುಗಿಲಿನ ಸೌಂದರ್ಯಸಿರಿ,
ಹಸಿರು ತಪೋವನ ಧೂಮಸ್ತಂಭವ ದಿಟ್ಟಿಸಿ ನೋಡಿತು ನೀಲಗಿರಿ (ಊರ್ವಶೀ)

೨) ಚಿನ್ನದ ಬಿಂದಿಗೆ ಬೆಳಕನು ಸುರಿಯಿತು ಮೂಡಲದೆಸೆಯಿಂದ.
ಮುಂಜಿನ ಹನಿಗಳನೆಸೆಯುತ ಬಂದಿತು ಗಾಳಿ ಬೊಗಸೆಯಿಂದ.
ಮೊಗ್ಗೆಯ ಬಾಯನು ಬಿಡಿಸುತ ಬಂದವು ದುಂಬಿಯ ಪರಿವಾರ,

ನೇರಿಲವೋಡವು ತೊಡಿಸುತ ಇಳಿದವು ಕಣಿವೆಗೆ
ಹೂಹಾರ. (ಶಬರಿ)

೩) ಹಂಸತೂಲಿಕಾತಲ್ಪದಲ್ಲಿ ಹೇಮಂತ ಕಣ್ಣು ತೆರೆದು.
ಸ್ವರ್ಣಛಾಯೆ ಸಿಂಧೂರ ಲೇಪ ಬಳಿದಂತೆ ಬಣ್ಣವೆರೆದು,
ಉಷಾಯಾತ್ರೆಯುದ್ಘೋಷದಲ್ಲಿ ಹೂಬಿಸಿಲು ಕುಂಭ
ಸುರಿದು,
ಬೆಳಕುಬಂತು ದಿಗ್ವಲಯಕಿಂತು ಚಳಿ ಮುಜಿನಾಟವಾಡಿ,
ಕುಳಿಗಾಳಿಯೆಳೆದಿತ್ತುಬಂದು ಹೊಂಬಿಸಿಲ ತೇರ ನೋಡಿ
(ವಸ್ತ್ರಾಪಹರಣ)

ಪ್ರಕೃತಿಯನ್ನು ಹಿನ್ನೆಲೆಯಾಗಿ ಬಳಸಿಕೊಳ್ಳುವದು ಎಕ್ಕುಂಡಿಯವರ ವೈಶಿಷ್ಟ್ಯ, ಈ ಬಣ್ಣಬಣ್ಣದ ಚಿತ್ರಗಳು ಕೀಟ್ಸನ ನೆನಪನ್ನು ತಂದುಕೊಡುತ್ತವೆ.

ರಮಣೀಯವಾದ ವರ್ಣಮಯ ಚಿತ್ರಗಳನ್ನು ಬರೆಯುವದರಲ್ಲಿ ವ್ಯಕ್ತಿಚಿತ್ರಗಳನ್ನು ಕೊರೆಯುವವರಲ್ಲಿ ಎಕ್ಕುಂಡಿಯವರು ನಿಷ್ಣಾತರು. "ಅವತಾರ"ದಲ್ಲಿ ಬರುವ ಕೃಷ್ಣನ ವರ್ಣನೆ, "ಸುಭದ್ರಾ"ದಲ್ಲಿ ಬರುವ ಅರ್ಜುನನ ವರ್ಣನೆ, "ಶಬರಿ"ಯಲ್ಲಿಯ ರಾಮನ ವರ್ಣನೆ, ಪುಂಡರೀಕನ ವರ್ಣನೆ, ಮಹಾಶ್ವೇತೆಯ ವರ್ಣನೆ, ಊರ್ವಶಿಯ ವರ್ಣನೆ-ಇವೆಲ್ಲ ಅವರ್ಣನೀಯವಾದವುಗಳು!

ಅದ್ವಿತೀಯ ಉಪಮೆ, ಉತ್ಪ್ರೇಕ್ಷೆಗಳೊಂದಿಗೆ ಉತ್ತಮ ಪ್ರತಿಮೆಗಳನ್ನು ಎಕ್ಕುಂಡಿಯವರು ಲೀಲಾಜಾಲವಾಗಿ ನಿರ್ಮಿಸಬಲ್ಲರು.

ಉದಾ :

೧) ಸರಸ ರಾಸಲೀಲೆಯಾಡಿ ತಿರುಗುತಿರುವ ತಿರೆ.
ನೆಲದ ಕನಸ ನೂಲುತಿರುವ ಮುಗಿಲನಾಡ ದೊರೆ.
ಇರುಳು ಕೂಡ ಬಿಚ್ಚುತ್ತಿತ್ತು ತನ್ನ ತಿಮಿರ ಪರೆ.
(ಗುರುಪ್ರಸಾದವಿದು ಸಮೀರ)

೨) ಭೋಗ ಸಮಾಧಿಯು ತಡಸಲು ಧುಮುಕಿತು ತಾಪಸ-
ಯುಮಳರ ತೋಟದಲಿ (ಊರ್ವಶೀ)

೩) ಮೂಡಲು ಕೆಂಪಿನ ಕಣ್ಣಿವೆ ತೆರೆಯುಲು ಹುಣ್ಣಿವೆ
ಕರಗಿತು ಮಾಟದಲಿ (ಮಿಲನ)

೪) ಸಾಲುಮರಗಳು ನೆರಳ ನಿಟ್ಟುಸಿರಿಟ್ಟು ತೆರೆದವು ನಾಲಿಗೆ
(ಗಜೇಂದ್ರಮೋಕ್ಷ)

೫) ದಿಗ್ದಿಗಂತಕೂ ಸಡಿಲುತ್ತಿದ್ದಿತೋ ಇರುಳ ತೋಳತೆಕ್ಕೆ
(ಶ್ವೇತಕೇತು ದೇವರ್ಷಿ)

ಆದರೆ ಎಕ್ಕುಂಡಿಯವರು ಕೇವಲ ಅಲೌಕಿಕ ಜಗತ್ತಿನಲ್ಲಿ, ಕಲ್ಪನಾಲೋಕದಲ್ಲಿ ವಿಹರಿಸುವ, ಸ್ವಚ್ಛಂದವಾಗಿ ಹಾಡುವ ಬಾನಾಡಿಯಲ್ಲ; ಲೌಕಿಕ ಜಗತ್ತಿನಲ್ಲಿ ಕೂಡ ಇವರ ಕಾಲುಗಳು ಸ್ಥಿರವಾಗಿ ಊರಿವೆ ಎನ್ನುವದನ್ನು ಸಿದ್ಧಪಡಿಸಲು ಇವರ ಭಾವ ಗೀತೆಗಳೇ ಸಾಕ್ಷಿ. ಇವರ ಭಾವಗೀತೆಗಳನ್ನು ಓದಿದರೆ ಇವರ ಕಾವ್ಯ ಯಾವ ರೀತಿ ನಮ್ಮ ದೇಶದ, ನಮ್ಮ ಸುತ್ತಮುತ್ತಲಿನ ಸಮಾಜ ಮತ್ತು ಪರಿಸರಕ್ಕೆ ಹೇಗೆ ಸ್ಪಂದಿಸುತ್ತದೆ ಎಂಬುದರ ಅರಿವಾಗುತ್ತದೆ. ಇವರ ಭಾವಗೀತೆಗಳಲ್ಲಿ ಸಮಕಾಲೀನ ಪ್ರಜ್ಞೆ

ಯೊಂದಿಗೆ ಸಾಮಾಜಿಕ ಸಂಬಂದ್ಧತೆಯೂ (Social relevance) ಉಂಟು. ಶೈಲಿಯ ಭಾವಗೀತೆಗಳಲ್ಲಿದ್ದಂತೆ ಇವರ ಭಾವಗೀತೆಗಳಲ್ಲಿಯೂ ಭಾವದ ತೀವ್ರ ಉತ್ಕಟತೆ, ಕಟ್ಟುಕತೆಯನ್ನು ಕಟ್ಟುವಿಕೆ (Mythmaking faculty)ಸಾಮಾಜಿಕ ಕಳಕಳಿ, ಗೇಯತೆ ತಳವೂರಿವೆ. ಭಾವ ಕವಿಯ ಹೃದಯದಲ್ಲಿ ಉಕ್ಕಿ, ಹೊರಹೊಮ್ಮಿ ಕಾವ್ಯಾತ್ಮಕವಾಗಿ ಹರಿದಿದೆ. ಅದು ಪ್ರೇಮವಿರಲಿ, ದೇಶಪ್ರೇಮವಿರಲಿ, ಭಕ್ತಿಯಿರಲಿ—ಅದು ಖಚಿತವಾಗಿ ಸಂಪೂರ್ಣವಾಗಿ, ಸಂಕೀರ್ಣವಾಗಿ ಆವಿಷ್ಕಾರ ಪಡೆದಿದೆಯೆಂದರೆ ತಪ್ಪಾಗಲಾರದು.

a) ಇವರ ಕಟ್ಟುಕತೆಯನ್ನು ಕಟ್ಟುವಿಕೆಗೆ ಈ ಕೆಳಗಿನ ನಿದರ್ಶನಗಳನ್ನು ಕೊಡಬಹುದು.

೧) "ಯಾವ ತಪ್ಪಿಗೋ ಬಿಳಿಯ ಮೋಡ ಪಡೆದಂತೆ
ಚಂದ್ರಶಾಪ
ಇಲ್ಲಿ ಕಾಣಿರೇ ಶ್ವೇತಮುಗ್ಧವೀ ರಾಜಹಂಸ ರೂಪ"
(ಅವಧೂತ)

೨) ಆದಿತಿ ಬೆಳಕು ತೇಜಸ್ವಿನಿ ಸಂತಾನನೆ ದೇವಕುಲ
ದಿತಿ ತಾಮಸಿ ನಿಶಾಚರಿಯ ಸಂತಾನನೆ ದೈತ್ಯಕುಲ.
(ಸಂತಾನ)

ಇವರು ಬರೆದ "ಕಲ್ಪನಾ ಕಲ್ಪವೃಕ್ಷ" ಮತ್ತು "ಇಬ್ಬರು ಶಿಲ್ಪಿಗಳು" ಈ ಕವನಗಳು ಕಟ್ಟುಕತೆಯ ಶಿಲ್ಪದ ಮೇಲೆಯೇ ನಿಂತಿವೆ.

b) ಉದಾ : "ಎಚ್ಚರಿಕೆ" "ಮೀನು ಪೇಟೆ" "ರೈತ ಸಭೆ" "ಇತಿಹಾಸ" ಮತ್ತು ಗಾಂಧೀಜಿಯವರ ಕುರಿತು ಇವರು

ಬರೆದ ಮೂರು ಕವನಗಳು ("ಗಾಂಧೀಜಿ", "ನೆನೆಯುವೆವು", ಮತ್ತು "ಮಹಾತ್ಮ")

ಇವರ ಭಾವಗೀತೆಗಳು ಕೂಡ ನಾದಮಾಧುರ್ಯದ ಅಮೃತ ಮಂಥನದಲ್ಲಿ ಪುಟಿದೆದ್ದು ಬಂದ ಕೌಸ್ತುಭಮಣಿಗಳು, ತಮ್ಮ ಅಪಾರ ಕಾಂತಿಯಿಂದ ಅನನ್ಯ ಶೈಲಿಯಿಂದ ಯಾರನ್ನಾದರೂ ದಂಗುಬಡಿಸುವ ಪ್ರವೃತ್ತಿಯುಳ್ಳವುಗಳು.

ಒಟ್ಟಿನಮೇಲೆ, ರಸಸಂಪ್ರದಾಯದ ಜಾಡಿನಲ್ಲೇ ಬರೆಯುತ್ತಿರುವ ಎಕ್ಕುಡಿಯವರು ತಮ್ಮ ಕಾವ್ಯದ ತಂಪು-ಇಂಪು, ಕಂಪುಗಳನ್ನು ನೀಡಿ ರಸಿಕರ ಎದೆ-ಕದ ತೆರೆದು ಅಂತರಾತ್ಮವನ್ನೂ ತಟ್ಟಿ ಆನಂದ ಉಣಬಡಿಸಿದ್ದಾರೆ. ಇವರ ಕಾವ್ಯ ಕೇವಲ ಸಂಗೀತ ಸೌಂದರ್ಯಗಳಿಗಷ್ಟೇ ಸೀಮಿತವಾಗಿಲ್ಲ. ಇವರು ಕೇವಲ ದಂತಗೋಪುರದಲ್ಲಿ ವಾಸಿಸುವ ಕವಿಗಳಲ್ಲ; ಕೇವಲ ಗಾಳಿಗೋಪುರಗಳನ್ನು ಕಟ್ಟುವವರಲ್ಲ, ಸಾಮಾಜಿಕ ಸಮಸ್ಯೆಗಳ ಮೇಲೆಯೂ "ಕ್ಷ" ಕಿರಣ ಚೆಲ್ಲಿದ್ದಾರೆ. ಬಡಜನರ ದುಃಖ ದುಮ್ಮಾನಗಳನ್ನು ಕಂಡು ಇವರ ಮೃದು ಹೃದಯ ಕರಗಿದೆ; ಮನಮರುಗಿದೆ. ನಮ್ಮದೇಶದ ಕುರಿತು, ಗಾಂಧೀಜಿಯವರ ಕುರಿತು ಇವರಿಗಿದ್ದ ಪ್ರೇಮ, ಭಕ್ತ್ಯಾದರಗಳು ಅಪಾರ. ಪರಮಾತ್ಮನಲ್ಲಿ ಅಚಲವಾದ ನಿಷ್ಠೆಯುಳ್ಳ ಇವರ ಕಾವ್ಯದಲ್ಲಿ ಭಕ್ತಿಯ ಅಂತರ್ಗಂಗೆ ಹರಿದಿದೆ. ಇವರ ಕಾವ್ಯಕೊಳದಲ್ಲಿ ಮಿಂದು,ಪಾವನರಾಗಿ,ದಿವ್ಯದೃಷ್ಟಿಯನ್ನು ಪಡೆದ ರಸಿಕರೆಷ್ಟೋ ಜನ. ಮೂಲತಃ ಧಾರವಾಡ ಜಿಲ್ಲೆಯವರಾದರೂ ಉತ್ತರ ಕನ್ನಡದ ನಿಸರ್ಗರಮಣೀಯವಾದ ಬಂಕೀಕೊಡ್ಲದಲ್ಲಿ ಮೂವ

ತ್ನಾಲ್ಕು ವರ್ಷ ದೀರ್ಘ ತಪಶ್ಚರ್ಯೆಮಾಡಿ, ಸಹಸ್ರಾರು ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆ ಮಾಡಿಸಿ ಸಂಘಜೀವಿಯಾಗಿ ಕವಿಯಾಗಿ ಅನುಭಾವಿಯಾಗಿ ತಮ್ಮ ಕಾವ್ಯಮೇಘದಿಂದ ಪರ್ಜನ್ಯಧಾರೆಯೆರೆದು ರಸಿಕರಿಗೆ ರಸದೂಟ ಬಡಿಸಿ ಅನೇಕ ಕವಿಕುಸುಮಗಳಿಗೆ ಜೀವಕಳೆ ತುಂಬಿದ್ದಾರೆ. ಹೊಸಗನ್ನಡದ "ಮಧುರಕವಿ" ಎಂದೇ ಹೆಸರಾದ ಇವರ ಕವನಗಳನ್ನು ಲಾವಣ್ಯಕವನಗಳು ಎಂದು ಬೇಂದ್ರೆಯವರು ಕರೆದದ್ದು ಯಥೋಚಿತವಾಗಿದೆ.

ವಿ. ಜಿ. ಭಟ್ಟ : ನವ್ಯಕಾವ್ಯ ಕನ್ನಡದಲ್ಲಿ ಕಾಲೂರಿ ಸ್ಥಿರವಾಗಿ ನಿಲ್ಲುವ ಮೊದಲೇ ನವ್ಯಕಾವ್ಯದ ಮುಖ್ಯ ಲಕ್ಷಣ ಗಳಲ್ಲೊಂದಾದ ವ್ಯಂಗವನ್ನು ಭಟ್ಟರು ತಮ್ಮ ಪ್ರಮುಖ ಆಯುಧವನ್ನಾಗಿ ಬಳಸಿಕೊಂಡಿದ್ದರು; ಸಾಮಾಜಿಕ ಪ್ರಜೆ-ಯನ್ನು ಪಳಗಿಸಿಕೊಂಡಿದ್ದರು. ಭಟ್ಟರು ಕಲ್ಪನಾಲೋಕದಲ್ಲಿ ಹಾರಾಡುವ ಬಾನಾಡಿಯಲ್ಲ; ಸಮಾಜದ ಎಲ್ಲ ಅಂಗಾಂಗಗಳ ನಾಡಿಯನ್ನು ಹಿಡಿದು, ತಮ್ಮ ಅಸಾಧಾರಣ ಚಾತುರ್ಯದಿಂದ ವೈದ್ಯಕೀಯ ಪರೀಕ್ಷೆಮಾಡಿ, ಸಾಮಾಜಿಕ ಮತ್ತು ಆರ್ಥಿಕ ರೋಗರುಜಿನುಗಳಿಗೆ ಪರಿಹಾರ ನೀಡಬಲ್ಲ ವ್ಯಕ್ತಿ. ಇವರು ಬರೆಯದ ವಸ್ತುವಿಲ್ಲ. ಕಸಬರಿಗೆಯಿಂದ ವಿಮಾನದವರೆಗೆ ಇವರ ವಿಕಟ ವ್ಯಂಗ್ಯ ವಿಡಂಬನೆ ಹಾರಾಡಿದೆ. ಔನ್ನತ್ಯ ಮತ್ತು ಹಾಸ್ಯಾಸ್ಪದಗಳ ಕಲಬೆರಕೆ, ಆಕಸ್ಮಿಕ, ವಿಸ್ಮಯ, ವಿಲ ಕ್ಷಣ ವಿನೋದ ಇವರ ಎಲ್ಲ ಕವನಗಳಲ್ಲಿ-ದೇಶಭಕ್ತಿ ಉದ್ದೀಪನ

ಗೊಳಿಸುವ ಕೆಲಕವನಗಳನ್ನು ಬಿಟ್ಟರೆ-ವ್ಯಾಪಿಸಿವೆ. "ಕಿಷ್ಕಿಂಧೆ" "ಅರಣ್ಯರೋದನ" "ಕಾವ್ಯವೇದನೆ" "ಆತ್ಮಶೋಧನೆ" ರಕ್ತಾಂಜಲಿ ಮತ್ತು "ಉತ್ತರಕಾಂಡ" ಇವು ಇವರ ಪ್ರಮುಖ ಕೃತಿಗಳು. ಎಕ್ಕುಂಡಿಯವರು ಪ್ರಪಂಚವನ್ನು ಯಕ್ಷಕಿರಣಗಳಿಂದ ನೋಡಿದರೆ ಭಟ್ಟರು "ಕ್ಷ" ಕಿರಣಗಳ ಬೆಳಕು ಚೆಲ್ಲಿ ಕೊಳೆಯನ್ನು ನೋಡಿ ಅವನ್ನು ತೆಗೆಯುವ ವಿಚಾರಮಾಡಿ ಸಮಾಜದ ರಾಡಿಯನ್ನು ಜನರ ಮುಂದಿಡುತ್ತಾರೆ. ಇವರು ನಿಸರ್ಗ. ರಮಣೀಯತೆಗೆ ಮಾರುಹೋಗಿಲ್ಲ; ನಾದಮಾಧುರ್ಯದ ಸಮೀಪ ಸುಳಿಯುವ ಗೋಜಿಗೆ ಹೋಗಿಲ್ಲ, ತಮ್ಮ ವಿಡಂಬನೆಯ ಚಾತುರ್ಯದಿಂದ ಕಾವ್ಯಹೆಣೆಯಬಲ್ಲರು; ಚತುರ ಚಾಟೂಕ್ತಿಗಳಿಂದ ಹಣಿಯಬಲ್ಲರು. ಅಸ್ವಸ್ಥ ಸಮಾಜ ಸುಧಾರಕರನ್ನು, ಮುಂದಾಳುಗಳನ್ನು ಚಾಟಿಮೇಟಿನಿಂದ ಬಡಿದು ಅವರಿಗೆ ತಮ್ಮ ಜವಾಬುದಾರಿಯನ್ನು ಕಲಿಸಬಲ್ಲರು. ಇಂಗ್ಲೆಂಡಿನಲ್ಲಿ ಹದಿನೇಳನೆಯ ಶತಮಾನದಲ್ಲಿ ರಸಸಂಪ್ರದಾಯದ ಕಾವ್ಯಧಾರೆ ಹರಿಯುತ್ತಿರುವಾಗ ಅವರ ವಿರುದ್ಧ ಹೋರಾಡಿ ಸೆಣಸಾಡಿದ ಕವಿ. John Donneನ ಪ್ರಭಾವ ಇವರ ಮೇಲೆ ಚೆನ್ನಾಗಿ ಬಿದ್ದಿದೆ.

ಅವನಂತೆಯೇ ಇವರೂ ಸಹ anti-climax ತಂತ್ರ, ಆಡುನುಡಿಯ ಬಳಕೆ, anti-romantic ಗುಣ, ವ್ಯಂಗ್ಯ, ನಿಷ್ಠೆ ಇಲ್ಲದ ಪ್ರೇಮ ಪ್ರಕರಣಗಳನ್ನು ಚಿತ್ರಿಸುವಿಕೆ-ಇತ್ಯಾದಿ ಗುಣಗಳಿಂದ Classical ಸಂಪ್ರದಾಯದ ನವ್ಯಕಾವ್ಯದ ಅಧ್ವರ್ಯುಗಳಾಗಿದ್ದಾರೆ.

ಇವರು ಬರೆದ ಪ್ರಣಯ ಗೀತೆಗಳು ಕೂಡ ಇವರ anti-romantic ಮನೋಧರ್ಮವನ್ನೇ ಸಾರುತ್ತವೆ. ಬೇಂದ್ರೆ, ಕೆ. ಎಸ್. ನರಸಿಂಹಸ್ವಾಮಿ, ಕಣವಿಯವರಿಗೆ ಪ್ರೇಮ, ಅಮರ ಮಧುರವಾಗಿದ್ದರೆ ಇವರಿಗೆ ಅದೊಂದು ವ್ಯಾಪಾರೀ ಮನೋವೃತ್ತಿಯ ವ್ಯವಹಾರ. ಇತರ Anti-romantic ಮನೋವೃತ್ತಿಯನ್ನು ಈ ಕೆಳಗಿನ ಉದಾಹರಣೆಗಳಲ್ಲಿ ಕಾಣಬಹುದು.

೧) ಸೂಳೆ ದೇಹದಲಿ ಸೋಸಿ ಹೋಯಿತೋ
ಅವನ ಕೆಟ್ಟ ಕಾಮ.
ಮಡದಿಗಾಗಿಯೇ ತಂದ ಭಟ್ಟಿ ಇಳಿ-
ಸಿರುವ ಶುದ್ಧ ಪ್ರೇಮ. (ಭಟ್ಟಿ ಇಳಿಸಿದ ಪ್ರೇಮ)

೨) ಒಲಿದು ಕೆಟ್ಟೆನಿದೊ ನಿನಗೆ ಪ್ರಿಯ
ನಿನಗೆ ಅಂಟಿಹುದು ಘೋರ ಕ್ಷಯ (ಒಲಿದು ಕೆಟ್ಟೆ)

೩) ಒಂದು ಖಂಡಿ ನಿಜ ಪ್ರೀತಿಯ ಕೊಟ್ಟರೆ
ಸಿಗುವದೆ ವಾರದ "ಸೀದಾ" ? (ಪ್ರೀತಿ ಸಾಲದು)

೪) ಹೀಗೆ ನನಗನಿಸುದದ ಹೇಳಲಿಯ ?
ಪ್ರೀತಿಸಲು ವೇಳೆಯೇ ಇಲ್ಲ ನನಗೆ.
....
ದಣಿದು ಹೆಣಬಿದ್ದಿರುವ ಇಂಥ ವೇಳೆ
ನನಗೇಕೆ ನಿನ್ನ ಈ ಪ್ರಣಯಲೀಲೆ! (ನಾನೆಂದಿಗೂ)

"ಕೊನೆಯ ದರ್ಶನ"ದಲ್ಲಿ ಬೇರೆಯೊಬ್ಬನನ್ನು ವರಿಸಿದ ಪ್ರೇಯಸಿಯು ತನ್ನ ಗಂಡನ ಮರಣ ನಿಶ್ಚಿತವೆಂದೂ ಅದಕ್ಕಾಗಿಯೇ ತಾನು ಹಾತೊರೆಯುವದಾಗಿಯೂ ತನ್ನ ಪ್ರಿಯತಮ-

ನಿಗೆ ಹೇಳುವದಾಗಲಿ, ಅಥವಾ "ಗೆ" ಎಂಬ ಕವನದಲ್ಲಿ "ಎದೆಯಲಿ ಒಂದೇ ವೇಳೆಗೆ! ಒಂದೇ ಬಿಂಬವು ಇರುವದು ಸುಳ್ಳು" ಎಂದು ಗಂಡಸಿನ ಬಹುಪತ್ನೀತ್ವ ಮನೋಧರ್ಮದ ಬಗ್ಗೆ ಹೇಳುವದಾಗಲಿ ಅಥವಾ.

"ಬಿಂಬಾಧರಗಳ ಬಿಚ್ಚದಿರು/ಸಖಿ
ಹಳಹಳಿಸಲು ಹಚ್ಚದಿರು
.. ..
ಮುಚ್ಚು ಮುಚ್ಚು ಆ ದಂತ ಪಂಕ್ತಿಗಳ
(ಮೂಗಿನ ಕೆಳಗೇ ದಿನ್ನೆ!)

ಎಂದು "ಪಶ್ಚಾತ್ತಾಪ"ದಲ್ಲಿ ಕವಿ ಹೇಳುವದಾಗಲಿ ಈ ಕವಿಯ Anti-romantic ಮನೋಧರ್ಮವನ್ನೇ ಎತ್ತಿ ತೋರಿಸುತ್ತದೆ ಮಾಜಿ ಪ್ರಿಯತಮ-ಪ್ರೇಯಸಿಯರು ತಮ್ಮ ಹಿಂದಿನ ಪ್ರೇಮ ಪ್ರಸಂಗಗಳನ್ನು ಮೆಲುಕು ಹಾಕುವ ರೀತಿ, ತಮ್ಮ ದಾಂಪತ್ಯ ಪ್ರೇಮದ ತುಣುಕುಗಳನ್ನು ಇಣಿಕಿ ನೋಡುವ ರೀತಿಯ ಕಥಾ ವಸ್ತುವುಳ್ಳ ಕವನಗಳು ಇತ್ತೀಚಿನ ಇವರ ಕೃತಿಯಾದ "ಉತ್ತರ ಕಾಂಡ" ದಲ್ಲಿ ಸಿಗುತ್ತವೆ. ಕವನಗಳ ಧಾಟಿ ಹಿಂದಿನಂತೆಯೇ ಅಥವಾ ಎಂದಿನಂತೆಯೇ anti-romantic. ಅಲ್ಲಲ್ಲಿ ಬರುವ ತುಂಟನಗು, ತಿವಿಯುವ ಅಲಗಿನ ಮೊನೆ, ವ್ಯಂಗ್ಯ ವಕ್ರೋಕ್ತಿ ಗಳು ಭಟ್ಟರ ವಿಶಿಷ್ಟಶೈಲಿಯಲ್ಲಿಯೇ ಬಂದಿವೆ.

ಇವರು ಬರೆದ ಚುರುಕುಗಳು ಇಂಗ್ಲೀಷಿನ Limerik ಜಾತಿಯವು. ವಿನೋದ ಸಮ್ಮಿಳಿತವಾದವುಗಳು. ಭಟ್ಟರ ಚಾಟೂಕ್ತಿ, ವಿಡಂಬನೆ, ಚಾಟಿಯೇಟು, ಕೊಂಕುನುಡಿ,

ಕೊನೆಯ ಸಾಲಿನಲ್ಲಿರುವ ಚೇಳಿನಕೊಂಡಿ ಹಾಸ್ಯದ ಹೊನಲನ್ನು ಹರಿಸುತ್ತವೆ. ಇವರನ್ನು "ಚುಟುಕು ಸಾಮ್ರಾಟ ಎಂದು ಕರೆಯಬಹುದು. ಸಂಖ್ಯೆಯಲ್ಲಿ ಇವರ ಚುಟುಕುಗಳ ಕಡಿಮೆಯಿದ್ದರೂ ಗುಣಮಟ್ಟದಲ್ಲಿ ಅವು ಶ್ರೇಷ್ಠವಾಗಿವೆ. ಪ್ರತಿಯೊಂದು ಚುಟುಕು Dynamiteದ ತುಣುಕು ಇದ್ದಂತೆ, ಕನ್ನಡಕ್ಕೆ ನೂತನವಾದ ವಿಡಂಬನಾತ್ಮಕವಾದ ಹಾಸ್ಯಮಯ ಕಾವ್ಯ ಸಂಪತ್ತನ್ನು ಕೊಟ್ಟ ಶ್ರೇಯಸ್ಸು ಭಟ್ಟರಿಗೆ ಸಲ್ಲುತ್ತದೆ.

ದಿನಕರ ದೇಸಾಯಿ : ದಿನಕರ ದೇಸಾಯಿಯವರು ಉತ್ತರ ಕನ್ನಡದ ಹಿರಿಯ ತಲೆಮಾರಿನ ಕವಿಗಳಾಗಿದ್ದರೂ ಅವರ ಪ್ರಥಮ ಕವನ ಸಂಕಲನ "ಕವನ ಸಂಗ್ರಹ" ಪ್ರಕಟವಾದದ್ದು ೧೯೫೦ರಲ್ಲಿ. ಇಲ್ಲಿ ಭಾವಗೀತೆಗಳು, ಶಿಶು ಗೀತೆಗಳು, ನಿಸರ್ಗ ಚಿತ್ರಗಳು ಚೆನ್ನಾಗಿ ಚಿತ್ರಿತವಾಗಿವೆ. ಗೋಕಾಕರ ಮಾತಿನಲ್ಲಿ ಹೇಳುವದಾದರೆ—"ದಿನಕರ ದೇಸಾಯರ ಜೀವನಲತೆಯಲ್ಲಿ ಅರಳಿದ ಎರಡು ಮಂದಾರ ಕುಸುಮಗಳು ಇವು-ಒಂದು ಅವರ ಕಾವ್ಯ; ಇನ್ನೊಂದು ಅವರ ಜನತಾ ಸೇವೆ. "ಈ ಮಾತು ಇಂದಿಗೂ ಸತ್ಯ, ಎಂದಿಗೂ ಸತ್ಯ."ಕೌದಿ" "ಕಾಲಿನ ಜೋಡು" ಗಳನ್ನು ಕವಿ ಸೇವೆಯ ಸಾಂಕೇತಗಳನ್ನಾಗಿ ಕಾಣುತ್ತಾನೆ. ಕಾಲಿನ ಸೇವಕನಾದ ಕಾಲಿನ ಜೋಡಿನ ಸೇವಾಗುಣಧರ್ಮ ತನಗೆ ಮುಂದಿನ ಜನ್ಮದಲ್ಲಿ ಬರಲಿ ಎಂದು ಅನ್ನುವಲ್ಲಿ ಕವಿಯ ಸೇವಾ ಮನೋಧರ್ಮದ ಉತ್ಕಟತೆ ಬಂದಿದೆ.

"ನನ್ನ ದೇಹದ ಬೂದಿ-ಗಾಳಿಯಲಿ ತೂರಿಬಿಡಿ,
ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ"

ಎಂಬಲ್ಲಿ ಬರುವ ನಾಡಿನ ನೆಲದ ಪ್ರೇಮ, ಉಪಕಾರಿ ಮನೋಭಾವ ಉತ್ತಮವಾಗಿ ಬಂದಿವೆ. ಇಲ್ಲಿಯ ಎಲ್ಲ ಭಾವಗೀತೆಗಳಲ್ಲಿ ಕವಿಯ ಭಾವೋತ್ಕಟತೆ ನಿರ್ಭರತೆ, ಸುಕುಮಾರತೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಕವಿ ಸಹಜವಾಗಿ ವಾಗಾಡಂಬರವಿಲ್ಲದೆ ಬರೆದಿದ್ದಾನೆ. ಆದ್ದರಿಂದ ಪ್ರತಿಯೊಂದು ಕವನವೂ. ರಸಿಕನ ಹೃದಯವನ್ನು ತಟ್ಟನೆ ತಟ್ಟುತ್ತವೆ. ಕನ್ನಡ ನಾಡಿನ ವರ್ಣನೆ. ದೇಶಭಕ್ತಿ, ಸಮತಾವಾದದತ್ತ ದೇಸಾಯಿಯವರಿಗಿದ್ದ ಒಲವು ಈ ಕವನಗಳಲ್ಲಿ ಪ್ರಕಟವಾಗಿವೆ. "ಪ್ರೇಮವೊಂದೇ ಜಗದ ಮೂಲತತ್ವದ ನೀತಿ" (ನನ್ನರಂಗಿ) ಎಂಬ ಮಹತ್ವಪೂರ್ಣವಾದ ವಿಚಾರವನ್ನು ಕವಿ ದಾರ್ಶನಿಕವಾಗಿ ಹೇಳುತ್ತಿಲ್ಲ.

"ಯಾವಳ ಕೈಯಲಿ ತೊಟ್ಟಿಲ ದಾರ
ಆಕೆಯು ಉಡಿಯಲಿ ಜಗದೋದ್ಧಾರ (ತಾಯಿ)

ಇದರಲ್ಲಿ "The hand that rocks the cradle rules the world" ಎಂಬುದರ ಛಾಯೆಯಿದ್ದರೂ ಹೇಳುವ ರೀತಿ ಸಹಜವಾಗಿದೆ; ಸೊಗಸಾಗಿದೆ. "ದೀನಗಿಂತ ದೇವ ಬಡವ" ಒಂದು ಶ್ರೇಷ್ಠ ಕವನ. "ಗಡಿಯಾರ" "ಸಾಬೂನು" "ವಿಮಾನ" ಮುಂತಾದ ಕವನಗಳು ಸಾಧಾರಣವಾಗಿ ಕಂಡರೂ ಅವುಗಳ ಗರ್ಭಿತಾರ್ಥಗಳಿಂದ ಅಸಾಧಾರಣವಾಗಿವೆ. ಇದೇ ಶೈಲಿಯಲ್ಲಿ "ಹೂಗೊಂಚಲು"; ಬಂದ ಕವನಗಳೂ ಆಕರ್ಷಕವಾಗಿವೆ; ಗಮನೀಯವಾಗಿವೆ, ಕಮನೀಯವಾಗಿವೆ. ಇವರ "ಮಕ್ಕಳ ಪದ್ಯ "ಗಳು ಕನ್ನಡ ಸಾಹಿತ್ಯದಲ್ಲಿಯೇ ಒಂದು ಹೊಸ ಹೆಜ್ಜೆ,

Blake ಕವಿಯು "songs of Innocence" ದಿಂದ ಪ್ರೇರಿತರಾದ ದೇಸಾಯರು, ಸಹಜವಾಗಿ, ಸುಂದರವಾದ, ಸಾದಾ ಮತ್ತು ಸರಳವಾದ ಶೈಲಿಯಲ್ಲಿ ಬರೆಯಲು ಸಮರ್ಥರಾದರು. ಮಕ್ಕಳ ಮನೋರಂಗವನ್ನು ಚೆನ್ನಾಗಿ ಅರಿತುಕೊಂಡಿರುವರು. ಆದ್ದರಿಂದ ಅವರ ಮಕ್ಕಳ ಪದ್ಯಗಳು ಆಬಾಲವೃದ್ಧರನ್ನು ತಣಿಸಬಲ್ಲವು. ಶಬ್ದಗಳ ಆಯ್ಕೆ, ಮಕ್ಕಳ ಹೃದಯ ವೈಶಾಲ್ಯ, ಅವರ ಮನಸ್ಸು, ಅವರನ್ನು ಬೇರೆ ಲೋಕಕ್ಕೆ ಒಯ್ಯುವ ಊಹೆ, ಅದ್ಭುತರಮ್ಯ ಕಲ್ಪನೆ, (Fantasy) ಮಕ್ಕಳ ಕಿವಿಗೆ ಇಂಪಾದ ಲಲಿತ ಮಧುರವಾದ ಪ್ರಾಸಮಯತೆ, ಪ್ರಸನ್ನತೆ, ಮಕ್ಕಳ ಉಲ್ಲಾಸಕ್ಕೆ ತಕ್ಕ ತಾಳಲಯಗಳ ಗತ್ತುಗಾರಿಕೆ-ಈ ಗುಣಗಳನ್ನು ಅಳವಡಿಸಿಕೊಂಡ ಅವರ ಕವನಗಳು ಚಿರಸ್ಥಾಯಿಯಾಗಿ ಮಕ್ಕಳ ಮನಸ್ಸಿನಲ್ಲಿ ನಿಲ್ಲಬಲ್ಲವು. ದೇಸಾಯರು ಕಡೆಕಡೆಗೆ ಚುಟುಕುಗಳನ್ನೇ ಬರೆಯುವದರಲ್ಲಿ ನಿರತರಾಗಿದ್ದರು. ನವ್ಯಕಾವ್ಯದ ಗಾಳಿ ಇವರನ್ನು ತಟ್ಟಿಲ್ಲ. "ದಿನಕರನ ಚೌಪದಿ" ಒಂದು ಮಹತ್ವದ ಸಾಧನೆ. ದಿನಕರ ದೇಸಾಯರು ಒಂದು ಧೀರೋದಾತ್ತ ಸಾಮಾಜಿಕ ಉದ್ದೇಶವನ್ನೇ ಇಟ್ಟುಕೊಂಡು ಕಾಳಜೀಪೂರ್ವಕವಾಗಿ ಬರೆಯುವ ಕವಿ. (He is a writer with a serious social purpose) ಇವರ ಚೌಪದಿಗಳು ಸಾಮಾಜಿಕ ದರ್ಶನವನ್ನೇ ತಮ್ಮ ಬಂಡವಾಳವನ್ನಾಗಿಟ್ಟುಕೊಂಡಿವೆಯೆಂದರೆ ಅತಿಶಯೋಕ್ತಿಯಾಗಲಾರದು. ಇವರು ಕಲ್ಪನಾ ಸಾಮ್ರಾಜ್ಯದಲ್ಲಿ ತೇಲಾಡಿ, ಮಗ್ನನಾಗುವ ಕವಿಯಲ್ಲ; ಸಮಾಜದ ಜೀವಂತ ಹಂದರದಲ್ಲಿ ಜ್ವಲಂತ ಸಮಸ್ಯೆಗಳನ್ನು ಗಂಭೀರವಾಗಿ ಚಿತ್ರಿಸುವ ಕವಿ. ಇಲ್ಲಿ ಬರುವ ಸಹಸ್ರಾರು ಚೌಪ-

ದಿಗಳಲ್ಲಿ ಸಮಾಜದಲ್ಲಿ ಕಂಡು ಬರುವ ಭ್ರಷ್ಟಾಚಾರ,ದುರಾಡಳಿತ ಮಹಾಲಸ್ಯ, ಸೋಗಲಾಡಿತನ, ನಮ್ಮ ಪುಡಾರಿಗಳ, ಪುಂಡತನ, ಮೊಂಡತನ, ಅವರ ಮಾತು ಮತ್ತು ಕೃತಿಗಳಲ್ಲಿಯ ದ್ವಂದ್ವ, ಕಳ್ಳಸಾಗಾಟ, ಲಂಚಗುಳಿತನ, ದೇಶವನ್ನು ವಿಚ್ಛಿದ್ರಗೊಳಿಸುವ ಶಕ್ತಿಗಳ ತಾಂಡವ, ಪಕ್ಷಾಂತರದ ಪಿಡುಗು—ಇತ್ಯಾದಿ ಅನೇಕ ಸಾಮಾಜಿಕ ವಿಷಯಗಳ ಮೇಲೆ ದೇಸಾಯಿರು "ಕ್ಷ" ಕಿರಣ ಚೆಲ್ಲಿ ಈ ಘೋರ ಸಮಸ್ಯೆಗಳ ಕಡೆಗೆ ಜನರ ಲಕ್ಷ್ಯವನ್ನು ಸೆಳೆದು ವಿಚಾರಮಾಡಲು ಹಚ್ಚಿದ್ದಾರೆ. ಅದನ್ನು ವ್ಯಂಗ್ಯವಾಗಿ, ಮನೋರಂಜಕವಾಗಿ ಬಯಲಿಗೆಳೆದಿದ್ದಾರೆ. ಕೆಲವೊಮ್ಮೆ ಈ ಚುಟುಕುಗಳು ಚರ್ವಿತಚರ್ವಣವಾಗುವದುಂಟು. ಕೆಲವೊಮ್ಮೆ ಅವು ಕೇವಲ ಪ್ರಾಸಗಳ ಕಸರತ್ತುಗಳಾಗಿ ಪರಿಣಮಿಸುವದೂ ಉಂಟು. ಆದರೂ ಈ ಚುಟುಕುಗಳು ಸಾಮಾಜಿಕ ಅನ್ಯಾಯಗಳನ್ನು ಗುರುತಿಸಿ, ಅವುಗಳ ಮೂಲ ಕಾರಣವನ್ನು ವಿಶ್ಲೇಷಿಸಿ ಅವುಗಳ ನಿವಾರಣೆಗಾಗಿ ಅನವರತ ಹೋರಾಡಿದ ದೇಸಾಯರ "ಹೃದಯ ಸಮುದ್ರ"ದೊಳಗಿಂದ ಹೊರಬಂದ ರತ್ನಗಳು. "ಚೌಪದಿಯ ಪಾಲಡಿಗೆ! ಕೆಡಕು ಮೆಟ್ಟುವನು" ಎಂದು ದೇಸಾಯರ ಬಗ್ಗೆ ವಿ. ಜಿ. ಭಟ್ಟರು ಹೇಳಿದ್ದು ಸಮಂಜಸವಾಗಿದೆ. ಈ ಚುಟುಕುಗಳಲ್ಲಿ ಸಮಕಾಲೀನ ಪ್ರಜ್ಞೆಯಿರುವದರಿಂದ ಇವು ಜೀವಂತವಾಗಿವೆ; ಕಾವ್ಯದ ಸತ್ವಪಡೆದಿವೆ. ಅಂತೆಯೇ ಈ ಸಿಡಿಮದ್ದಿನ ಕಿಡಿಗಳು ಕುಡಿಗಳಾಗಿ ಬೆಳಗುತ್ತಿವೆ.

"ದಾಸಾಳ" ಇವರ ಕೊನೆಯ ಕವನ ಸಂಕಲನ, ಇದರಲ್ಲಿಯೂ ಅನೇಕ ಭಾವಗೀತೆಗಳಿವೆ. ಪ್ರಸಿದ್ಧಿಗಾಗಿ ಹಪಾಪಿಸದೆ, ತನ್ನ ಜೀವನವನ್ನು ಚಂದನದ ಕೊರಡಂತೆ ತೇದು ಜನತೆಯ

ಕಲ್ಯಾಣಕ್ಕಾಗಿ, ಅವಿರತವಾಗಿ, ಅವಿಶ್ರಾಂತವಾಗಿ, ದಣಿವಿಲ್ಲದ ದುಡಿತದಿಂದ ಕರ್ಮಯೋಗಿಯಂತೆ ಜೀವನ ಸಾಗಿಸಿದ ದೇಸಾಯರಿಗೆ ಹಮ್ಮು ಬಿಮ್ಮುಗಳಿಲ್ಲದ, ಬಿರುದು ಬಾವಲಿಗಳಿಗೆ ಕೈಚಾಚದ ಸಾಮಾನ್ಯ ಜಾತಿಯ ಈಶ್ವರನಿಗೆ ಪ್ರಿಯಕರವಾದ ಕೆಂಪು ದಾಸಾಳ ಹೂವು ಸ್ಫೂರ್ತಿಕೊಡುತ್ತದೆ. "ದಾಸಾಳ ನನ್ನ ಜೀವನದ ರೀತಿ" ಎನ್ನುವದು ಯಥಾರ್ಥವಾಗಿದೆ. "ನೆಹರೂ ಆಡಳಿತ" "ಸ್ವರ್ಗದ ಗೆಳೆಯನಿಗೆ ಬರೆದ ಪತ್ರ" "ಗಿಡಗ ಹಾರುತಿದೆ ನೋಡಿದಿರಾ ?" ಮುಂತಾದ ಕವನಗಳಲ್ಲಿ ರಾಜಕೀಯ, ಡಂಭಾಚಾರ, ಭ್ರಷ್ಟಾಚಾರಗಳ ಯಥಾಪ್ರಕಾರ ವರ್ಣನೆಯಿದೆ. ದೇಸಾಯರಲ್ಲಿ ಜನಜೀವನವನ್ನು ನೋಡುವ ಕಲೆಯಿದ್ದರೂ ಅದನ್ನು ಸಹಜವಾಗಿ ಅಭಿವ್ಯಕ್ತಿಗೊಳಿಸುವ ಚಾತುರ್ಯವಿದ್ದರೂ ಅನುಭವವನ್ನು ಪರಿಪಕ್ವವಾದ ಕಾವ್ಯಮಯವಾದ ಶೈಲಿಯಲ್ಲಿ ಬರೆಯುವ ಪ್ರೌಢಿಮೆಯಿಲ್ಲ. ಪರಿಶುದ್ಧ ಆನಂದವೇ ಇರಲಿ, ಗಾಢ ವಿಷಾದವೇ ಇರಲಿ, ಚಿತ್ತಾಲರ ಕಾವ್ಯದಲ್ಲಿ ಅದು ಅನುಭವದ ರಸಸಿದ್ಧಿಯಾಗಿ ಪ್ರೌಢ ಅಭಿವ್ಯಕ್ತಿಯೊಂದಿಗೆ ಕಾವ್ಯ ಸತ್ವಪೂರ್ಣವಾಗಿ ಉಕ್ಕುತ್ತದೆ. ಅದು ದೇಸಾಯರಲ್ಲಿ ಇಲ್ಲ. ಇವರ ಕಾವ್ಯದಲ್ಲಿ ನಿರೀಕ್ಷಣೆ (Observation)ಇದೆ, ಆದರೆ ಅನುಭವದ ಅಭಾವ ಎದ್ದು ಕಾಣುತ್ತದೆಯೆಂಬುದನ್ನು ಒಪ್ಪಲೇಬೇಕು.

ಬಿ. ಎಚ್. ಶ್ರೀಧರ : ಅನೇಕ ವರ್ಷಗಳಿಂದ ಬಿ.ಎಚ್. ಶ್ರೀಧರರು ಬರೆಯುತ್ತಲೇ ಇದ್ದಾರೆ. ಇವರು ವಿಪುಲವಾಗಿ ಬರೆದಿದ್ದಾರೆ. "ಮೇಘನಾದ" "ಅಮೃತಬಿಂದು" "ಮಂಜುಗೀತ" "ರಸಯಜ್ಞ" ಇತ್ಯಾದಿ ಕವನ ಸಂಕಲನಗಳನ್ನು ಪ್ರಕಟಿಸಿ

ದ್ದಾರೆ. ಮೊದಮೊದಲು ಬರೆದ ಇವರ ಕಾವ್ಯಭಾಷೆ ಸಂಸ್ಕೃತ ಭೂಯಿಷ್ಠವಾದ್ದರಿಂದ ಪಾಂಡಿತ್ಯ ಅಧಿಕವಾದ್ದರಿಂದ ಇವರು ಜನಪ್ರಿಯರಾಗಲಿಲ್ಲ. ಇವರು ವಿಪುಲವಾಗಿ ಬರೆದದ್ದರಿಂದಲೋ ಏನೋ "ಉದ್ದಾಮ ಕವಿ" ಎಂಬ ಆರೋಪವನ್ನು ಇವರ ಮೇಲೆ ಹೊರಿಸಲಾಗಿದೆ! ಇವರ ಕಾವ್ಯದಲ್ಲಿ ಕಾವ್ಯದ ಸತ್ವ ಕಡಿಮೆಯೆಂದು ಹೇಳಲೇಬೇಕು. ನವ್ಯಕಾವ್ಯ ಬಂದ ನಂತರ ಇವರು ತಮ್ಮ ಕಾವ್ಯಭಾಷೆಯನ್ನು ಬದಲಾಯಿಸಿಕೊಂಡು ವಿವಿಧ ವಿಷಯಗಳ ಮೇಲೆ ಬರೆದರೂ ಯಾವುದೇ ವಿಷಯವನ್ನು ನಿರ್ದಿಷ್ಟವಾಗಿ ಹೇಳುವಲ್ಲಿ ಯಶಸ್ವಿಯಾಗಿಲ್ಲ. ಕೆಲವೊಮ್ಮೆ ವಿಡಂಬನೆಯ ಮಿಂಚು ಅಲ್ಲಲ್ಲಿ ಝಳಪಿಸಿ ನಗೆಬುಗ್ಗೆ ಎಬ್ಬಿಸುವುದುಂಟು. ಇದಕ್ಕೆ "ಕಾಣ್ಕೆ" "ವೇಸ್ಟುಸೂಕ್ತ" "ಕಳ್ಳಭಟ್ಟಿ ಶಿಷ್ಯರನ್ನು ಬೀಳ್ಕೊಡುವಾಗ" "ಆಸ್ಥಾನ ವಿದೂಷಕ" "ನನ್ನ ಠೀವಿ" ಮುಂತಾದ ಉದಾಹರಣೆಗಳನ್ನು ಕೊಡಬಹುದು. "ಉದಯರಾಗ" "ಉತ್ತರರಾಗ"__ಈ ಕವನಗಳಲ್ಲಿ ತಮ್ಮ ಪ್ರಿಯತಮಳಾದ ಅನುಭವಗಳನ್ನು ಉತ್ತಮವಾಗಿ ಚಿತ್ರಿಸಿದ್ದಾರೆ. ಅನೇಕ ಕವನಗಳು ಪದಲಾಲಿತ್ಯವನ್ನು ಪಡೆದರೂ ಪರಿಣಾಮಕಾರಿಯಾಗಿಲ್ಲ. ಕವಿ ಶರವೇಗದಿಂದ ಶಬ್ದಗಳ ಮೇಲೆ ಶಬ್ದಗಳ ಬಾಣಗಳನ್ನು ಗುರಿಯಿಲ್ಲದೆ ಬಿಟ್ಟಂತಾಗಿದೆ. ಇತ್ತೀಚಿನ ಕವನಗಳಲ್ಲಿ ರಾಜಕೀಯ ಭ್ರಷ್ಟಾಚಾರ, ಆಡಂಬರದ ಬಣ್ಣದ ಬದುಕನ್ನು ಕಂಡು ಸಿಡಿಮಿಡಿಗೊಂಡು ಇವರು ಟೀಕಾಸ್ತ್ರಗಳನ್ನು ಎಸೆದದ್ದುಂಟು. ಆದರೆ ಇತ್ತೀಚಿನ ಇವರ ನವ್ಯಕಾವ್ಯದ ಮಾದರಿಯ ಶೈಲಿ ಗದ್ಯದ ಅಂಚನ್ನು ಮುಟ್ಟಿ ಕೃತ್ರಿಮವಾಗಿದೆ. ಉದಾ : "ವಶಾನವೋಭವ" ಅಥವಾ "ದಿಲ್ಲೀಶ್ವರ-ದಿನಚರಿ."

೩೦. ಅಕಬರ ಅಲಿ : ಇವರು ಮೂಲತಃ ಬೆಳಗಾಂವಿ ಜಿಲ್ಹೆಯವರಾದರೂ ಇವರ ಕಾವ್ಯ ಕುಸುಮ ಅರಳಿ ಮಹತ್ತರವಾದ ಘಟ್ಟವನ್ನು ತಲುಪಿದ್ದು ಕಾರವಾರದಲ್ಲಿ. ಅಲ್ಲಿಯ ಆರ್ಟ್ಸ ಮತ್ತು ಸಾಯನ್ಸ ಕಾಲೇಜಿನಲ್ಲಿ ಕನ್ನಡ ವಿಭಾಗದಮುಖ್ಯಸ್ಥರಾಗಿ ಸುಮಾರು ಹದಿನೈದು ವರ್ಷ ಸೇವೆಸಾಡಿದ್ದರಿಂದ ಇವರನ್ನು ಉತ್ತರ ಕನ್ನಡದ ಕವಿ ಎಂದು ಗಣಿಸಲಾಗಿದೆ. ಕಾರವಾರಕ್ಕೆ ಬರುವ ಮೊದಲು ಚುಟುಕುಗಳನ್ನೂ ಸುನೀತಗಳನ್ನೂ ಇವರು ಬರೆದಿದ್ದರು. ಚುಟುಕುಗಳು ವಿಡಂಬನೆ, ಚಾಟೂಕ್ತಿಗಳ ಅಭಾವದಿಂದಾಗಿ ನೀರಸವಾಗಿದ್ದವು. ಸುನೀತಗಳು ಅಷ್ಟಕಷ್ಟೇ. ಆದರೆ "ಪ್ರಪಂಚ" ಪತ್ರಿಕೆಯಲ್ಲಿ ಇವರು ಹೊಡೆದ 'ಕಾವ್ಯ ಬಾಣ' ಗಳು ಕಾವ್ಯಮಯವಾಗಿದ್ದರಿಂದ ರಸಿಕರನ್ನು ಆಕರ್ಷಿಸಿದವು. "ಸುಮನಸೌರಭ" "ನವಚೇತನ" "ಗಂಧಕೇಶರ" ತಮಸಾನದಿ ಎಡಬಲದಿ"ಇವರ ಪ್ರಮುಖ ಕೃತಿಗಳು. ಸಾಂಪ್ರದಾಯಕ ಜಾಡಿನಲ್ಲಿಯೇ ಮೊದಮೊದಲು ಬರೆದ ಇವರು ನಂತರ ನವ್ಯಕಾವ್ಯದಿಂದಲೂ ಸ್ಫೂರ್ತಿಪಡೆದು "ಹಾವು ಹೆಡೆ ಬಿಡಿಸಿದಾಗ" "ಮೃಗಯಾವಿಹಾರ" "ಗಾಳಿಮರ" "ಲೋಕವೇ ಸಾಕ್ಷಿ" ಮುಂತಾದ ಉತ್ತಮ ಕವನಗಳನ್ನು ಬರೆದಿದ್ದಾರೆ. ಎಕ್ಕುಂಡಿ, ಕಣವಿಯವರಂತೆ ಇವರು ಸಹಜವಾಗಿ, ಸೊಗಸಾಗಿ, ನಯವಾಗಿ ನಾಜೂಕಾಗಿ ಸ್ಫಟಿಕಮಯ ಶೈಲಿಯಲ್ಲಿ ಬರೆಯಬಲ್ಲರು. ಪ್ರಸನ್ನತೆ, ಪ್ರಫುಲ್ಲತೆಗಳು. ಇವರ ಕಾವ್ಯದ ವಿಶಿಷ್ಟ ಲಕ್ಷಣಗಳು, ಶಬ್ದಶಕ್ತಿಯ ಮೇಲೆ ಹಿಡಿತವಿರುವದರಿಂದ ಶ್ಲೇಷೆಯನ್ನು ಸುಲಭವಾಗಿ ಬಳಸಬಲ್ಲರು. ಅಲ್ಲದೆ ಸಂಕೇತಗಳ ಮೂಲಕ ಪರಿಣಾಮಕಾರಿಯಾಗಿ ಬರೆಯಬಲ್ಲರು. ನಿಸರ್ಗ

ಪ್ರೇಮ, ದೇಶಭಕ್ತಿ, ರಾಜಕೀಯ ಡಂಭಾಚಾರ, ಲಂಚಗುಳಿತನ ಹಾಗೂ ಸಾಮಾಜಿಕ ಮತ್ತು ಆರ್ಥಿಕ ಸ್ಥಿತ್ಯಂತರಗಳು–ಇವರ ಕಾವ್ಯವಸ್ತು, ಇವರ ಕೆಲವೊಂದು ಚುಟುಕುಗಳಲ್ಲಿ ವಿಡಂಬನೆ ಮರ್ನ ಮಾಡಿಕೊಂಡಿದೆ. ನಿಸರ್ಗ ಚಿತ್ರಗಳಿಗೂ ಇವರು ಚುಟುಕನ್ನು ಉಪಯೋಗಿಸಿಕೊಂಡಿದ್ದು ದುರದೃಷ್ಟಕರ, ಇವರ ಕಾವ್ಯದಲ್ಲಿ ಗಂಗಾಧರ ಚಿತ್ತಾಲರ ಕಾವ್ಯದಲ್ಲಿದ್ದಂತೆ ಪ್ರತಿಭಾಶಕ್ತಿಯ ಪ್ರೌಢ ಅಭಿವ್ಯಕ್ತಿ ಮತ್ತು ಚಿಂತನಶೀಲತೆಗಳು, ಅಪ್ರತಿಮ ಪ್ರತಿಮೆಗಳು ಅಧಿಕ ಪ್ರಮಾಣದಲ್ಲಿ ಕಂಡುಬರುವದಿಲ್ಲ. ಇತ್ತಿತ್ತ ಲಾಗಿ ಇವರು ಈಗ ವಿರಳವಾಗಿ ಬರೆಯುತ್ತಿದ್ದಾರೆ.

ಜಿ. ಆರ್. ಪಾಂಡೇಶ್ವರ : ಇವರು ಹಳೆಯ ತಲೆಮಾರಿನ ಕನ್ನಡದ ಹುಲಿ. ಮೂಲತಃ ದಕ್ಷಿಣ ಕನ್ನಡದವರು. ಬದುಕಿನ ಕೊನೆಯ ದಶಕಗಳಲ್ಲಿ ಉತ್ತರ ಕನ್ನಡದಲ್ಲಿ ನೆಲೆಸಿದರು. ೧೯೨೮ರಲ್ಲಿಯೇ ಇವರ "ಹೂಗೊಂಚಲು"ಪ್ರಕಟವಾಯಿತು. ಅದರ ನಂತರ "ಸುಪಂಥಾ" "ಚೆಂಗಲವೆ" ಮುಂತಾದ ಕವನಸಂಕಲನಗಳು ಪ್ರಕಟವಾದವು. "ಚೆಂಗಲವೆ"ಯ ಮುನ್ನುಡಿಯಲ್ಲಿ ಗೋವಿಂದ ಪೈ ಅವರು ಇವರನ್ನು ತುಳುನಾಡಿನ ಹಾಡುವಕ್ಕಿ, ಹಾರುವಕ್ಕಿ ಎಂದು ಕರೆದು, ಇವರ ಕಾವ್ಯದ ಕುರಿತು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಸಮಾಜದ ಅನೇಕ ಕ್ಷೇತ್ರಗಳಲ್ಲಿ ಇವರು ದುಡಿದದ್ದರಿಂದ ಕೇವಲ ಕಾವ್ಯಕ್ಕೆ ಮಾತ್ರ ಇವರ ಬೌದ್ಧಿಕತೆ, ಜಾಣ್ಮೆಗಳು ಸೀಮಿತವಾಗಲಿಲ್ಲ. ಇಲ್ಲದಿದ್ದರೆ ಇವರು ಶ್ರೇಷ್ಠ ಕವಿಗಳಾಗಬಹುದಿತ್ತೇನೋ! ಇವರು ಉತ್ತಮ ರೂಪಕಗಳಿಂದ ತಮ್ಮ ಕಾವ್ಯಸೌಧ ಕಟ್ಟಬಲ್ಲರೆಂಬುದಕ್ಕೆ ಇವರ

'ಪಂಡಿತವಕ್ಕಿ' 'ನವಜೀವನ' 'ಮಾರಾವತಾರ' 'ಅನ್ವೇಷಣೆ' ಮುಂತಾದ ಕವನಗಳೇ ಸಾಕ್ಷಿ. ಪಾಂಡೇಶ್ವರರು ಜೀವನದಲ್ಲಿ ಹೆಚ್ಚಾಗಿ ದುಃಖದುಗುಡಗಳನ್ನೇನೋಡಿದ್ದರಿಂದಅನು,ಭವಿಸಿದ್ದ ರಿಂದ ಇವರ ಕವನಗಳಲ್ಲಿ ವ್ಯಥೆಯೇ ಕಥೆಯಾಗಿ ಬಂದಿದೆ. "ಸುಪಂಥಾ"ದಲ್ಲಿ ಬೇರೆ ಬೇರೆ ಛಂದಸ್ಸಿನ ಪ್ರಯೋಗಗಳನ್ನು ಇವರು ಯಶಸ್ವಿಯಾಗಿ ಮಾಡಿದ್ದಾರೆ. ಯಕ್ಷಗಾನದಲ್ಲಿಯೇ ನುರಿತ ಹಾಗೂ ನರೆತ ಈ ಜೀವಕ್ಕೆ ತಾಳಲಯ, ಕುಣಿತಗಳ ಅಪಾರ ಜ್ಞಾನವಿದ್ದುದರಿಂದ ಇವರ ಶಬ್ದ ಶಕ್ತಿಯ ಮೇಲಿನ ಹಿಡಿತ ಎಂದೂ ಸಡಿಲಾಗುವದಿಲ್ಲ. ಇವರ ಭಾಷೆ ಈಗಿನವರಿಗೆ ತುಸು "out moded" ಹಳತು ಎಂದು ಕಾಣಿಸುವವರಿಂದ ಆಕರ್ಷಣೆ ಕಳೆದುಕೊಳ್ಳುವ ಭೀತಿಯಿದೆ.

ಸ. ಪ. ಗಾಂವಕರ : ಉತ್ತರ ಕನ್ನಡದ ಹಿರಿಯ ತಲೆ ಮಾರಿನ ಕವಿಗಳಲ್ಲಿ ಸ. ಪ. ಗಾಂವಕರರೂ ಒಬ್ಬರು. ಅವರ ಭಾಷಾಪ್ರಭುತ್ವ ಕಾವ್ಯಶಕ್ತಿಯ ಅಂತಃಸತ್ವಗಳಿಗೆ ಅವರು ಭಾಷಾಂತರಿಸಿದ "ಗೀತಾಂಜಲಿ" ಒಂದು ಉತ್ತಮ ಉದಾ-ಹರಣೆ. ಅನೇಕ ವರ್ಷಗಳ ಹಿಂದೆ ಎಷ್ಟೋ ಕವಿತೆಗಳನ್ನು ಈ ಸ್ವಾತಂತ್ರ್ಯ ಹೋರಾಟಗಾರರು ಬರೆದಿದ್ದರೂ ಅವರ 'ಪ್ರಕೃತಿ–ಪ್ರೀತಿ' ಪ್ರಕಟವಾದದ್ದು ೧೯೬೯ರಲ್ಲಿ. ಈ ಕವನ ಸಂಗ್ರಹದಲ್ಲಿಯ 'ಪ್ರಭಾತರವಿ' 'ಅಬೂ ಪಹಾಡದ ಸಂಧ್ಯಾ ಬಿಂದು' "ಖಂಡಾಳದಲ್ಲಿ ಮೇಘವಾಲೆ" 'ಲೋಣಾವಳದ ಬೆಳ ಗಿನ ಹೂವುಗಳು' ಮುಂತಾದ ಕವನಗಳಲ್ಲಿ ನಿಸರ್ಗ ಸೌಂದರ್ಯ ವನ್ನು ಇವರು ತಮ್ಮ ಕಾವ್ಯಶಕ್ತಿಯ ಪ್ರತಿಭೆಯಿಂದ ಸೆರೆಹಿಡಿದು

ನಿಲ್ಲಿಸಿದ್ದಾರೆ. ಇವರು ಕಾವ್ಯವನ್ನು ಸಹಜವಾಗಿ ಬರೆಯಬಲ್ಲರು. ಎಲ್ಲಿಯೂ ವಾಚಕರು ಕೃತ್ರಿಮತೆಯನ್ನು ಕಾಣುವದಿಲ್ಲ. "ಸುತದೇವನೆಲ್ಲಿ ?" ಅಗಲಿದ ಮಗನನ್ನು ಕುರಿತು ಬರೆದ ಚರಮಗೀತೆ, ಯಾರ ಕರುಗಳನ್ನಾದರೂ ಹಿಂಡದೇ ಇರಲಾರದ ಕವಿತೆ. ಕವಿ ತನ್ನ ಮಗನಲ್ಲಿ ಸಂಪೂರ್ಣವಾಗಿ, ತಾದಾತ್ಮ್ಯವಾಗಿ ಲೀನನಾಗುತ್ತಾನೆ. "ಚಿತೆಯಲ್ಲಿ ಸುಡುತಿರುವ ನನ್ನ ನಾ ಕಂಡೆ" ಎಂಬ ಸಾಲಿನಲ್ಲಿ ಇದು ಸ್ಪಷ್ಟವಾಗುತ್ತದೆ. ದಿನಕರ ದೇಸಾಯಿ ರಂತೆ ಇವರೂ ಸಹ ಕಾವ್ಯಕ್ಕಿಂತ ಹೆಚ್ಚು ಜನಸೇವೆಗೆ ತಮ್ಮ ದೇಹವನ್ನು ಗಂಧದ ಕೊರಡಂತೆ ತೇದ ಜಿಲ್ಲೆಯ ಧೀಮಂತ ವ್ಯಕ್ತಿ ಎಂಬುದನ್ನು ನಾವು ನೆನಪಿನಲ್ಲಿಟ್ಟು ಕೊಳ್ಳಬೇಕು.

ಅರವಿಂದ ನಾಡಕರ್ಣಿ : ಇವರು "ತಮ್ಮ" ಕಾವ್ಯಾರ್ಪಣ" ದೊಂದಿಗೆ ಕಾವ್ಯಕ್ಷೇತ್ರದಲ್ಲಿ ಪದಾರ್ಪಣೆ ಮಾಡಿದ್ದಾರೆ. ಈ ಕವನಸಂಕಲನದಲ್ಲಿ ರಸಸಂಪ್ರದಾಯದ ಜಾಡಿನಲ್ಲಿಯೇ ಬರೆದ ಅನೇಕ ಉತ್ತಮ ಕವನಗಳಿವೆ. ಈ ಸಂಪ್ರದಾಯ ಅಲ್ಲಲ್ಲಿ ನವ್ಯಕಾವ್ಯದ ಓಘದೊಡನೆ ಮಧುರ ಮಿಲನಗೊಂಡರೂ ಇವರಿಗೆ ರಸಸಂಪ್ರದಾಯದ ಕಡೆಗೇ ಒಲವು ಹೆಚ್ಚು ಇತ್ತು. ಸಾಮಾಜಿಕ ಸಮಸ್ಯೆಗಳ ಕುರಿತು ಇವರು ಬರೆದರೂ ಪ್ರಕೃತಿ ವರ್ಣನೆಗೇ ಇವರು ಪ್ರಾಶಸ್ತ್ಯ ಕೊಟ್ಟಿದ್ದಾರೆ. ಸುಕುಮಾರತೆ, ನಾದಮಾಧುರ್ಯಗಳು ಇಲ್ಲಿಯ ಕವನಗಳ ವೈಶಿಷ್ಟ್ಯಗಳು. ಇಲ್ಲಿಯ ಕೆಲವೊಂದು ಕವನಗಳ ಮೇಲೆ ಬೇಂದ್ರೆ ಎಕ್ಕುಂಡಿಯವರ ಪ್ರಭಾವಮುದ್ರೆ ಚೆನ್ನಾಗಿ ಬಿದ್ದಿದೆ. ಇವರ "ನಾಭಾರತೀಕುಮಾರ" ಒಂದು ಶ್ರೇಷ್ಟಕೃತಿ. ಇದರಲ್ಲಿ ಕವಿ ನವ್ಯದ

ಧಾಟಿಯಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಅಳವಡಿಸಿಕೊಂಡು, ಆಡುಮಾತಿನ ಕಸುವನ್ನು ಬಳಸಿಕೊಂಡು ಬಾಳಿನ ತುಮುಲ ದ್ವಂದ್ವಗಳನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಈ ಮಹತ್ವದ ಕೃತಿ ಇವರ ಸ್ವೋಪಜ್ಞತೆಯ ಪರಿಪಕ್ವತೆಯ ದ್ಯೋತಕ. ವಿಡಂಬನೆಯನ್ನೇ ಮುಖ್ಯ ಆಯುಧವನ್ನಾಗಿ ಉಪಯೋಗಿಸಿ, ರಾಮಾಯಣ, ಮಹಾಭಾರತಗಳಿಂದ ಉದ್ಧೃತ ವಾಕ್ಯಗಳನ್ನು ಬಳಸಿಕೊಂಡು, ಅನುಭವದ ಆಳದಿಂದ ಸೂಕ್ಷ್ಮ ಸಂವೇದನೆಯಿಂದ ಸಂಯಮದ ಶಬ್ದ ಜೋಡಣೆಯಿಂದ ಬರೆದ ಈ ಕೃತಿ ನಿಜವಾಗಿಯೂ ಶ್ಲಾಘನೀಯ. ಆದರೆ ಇವರ "ಮಾಯಾವಿ" "ನಗರಾಯಣ" ನೀರಸ ಕೃತಿಗಳೆಂದು ನಿರಾಸೆಯಿಂದ ಹೇಳಲೇಬೇಕು. ನಗರ ಜೀವನದ ಕೃತ್ರಿಮತೆ, ಡಂಭಾಚಾರ ವಂಚನೆಗಳು ಪದೇ ಪದೇ ಇವರ ಕಾವ್ಯದಲ್ಲಿ ಬರುವ ವಸ್ತುಗಳಾದ್ದರಿಂದ, ಬರೆಯುವ ತಂತ್ರ ಹಾಗೂ ಶೈಲಿಯಲ್ಲಿ ಮಹತ್ವದ ಬೆಳವಣಿಗೆಯ ಲಕ್ಷಣಗಳು ಕಾಣದ್ದರಿಂದ ಕೆಲವೊಮ್ಮೆ ಇವರ ಗದ್ಯಾತ್ಮಕ ಪದ್ಯಗಳು ನೀರಸವಾಗಿ ಕಾಣುವ ಭೀತಿಯಿದೆ. ನಿರೂಪಣೆಯ ವೈವಿಧ್ಯ ಇಲ್ಲದ್ದರಿಂದಲೂ, ಹೇಳಿದ್ದನ್ನೇ ಹೇಳುವದರಿಂದಲೂ ಇವರ ಅನೇಕ ಕವನಗಳು Monotonous ಆಗಿವೆ. ವಿಡಂಬನಾತ್ಮಕ ಕವನಗಳಲ್ಲಿಯ ಹಾಸ್ಯ (ಅದು ಇದ್ದರೆ!) ಕೃತಕವೆನಿಸುತ್ತದೆ. "ಆತ್ಮಭಾರತ" ದಲ್ಲಿ ಕೆಲವೊಂದು ಉತ್ತಮ ಕವಿತೆಗಳು ಓಯಾಸಿಸ್ಸುಗಳಂತೆ ಅಲ್ಲಲ್ಲಿ ಕಂಡರೂ ನೀರಸವಾದ ಅವರ ಕಾವ್ಯದ ಛಾಪು ನಿಚ್ಚಳವಾಗಿ ಬಿದ್ದಿದೆ. ನಗರ ಜೀವನದ ಕೃತ್ರಿಮತೆಯನ್ನು ಸೆರೆಹಿಡಿಯುವ ಪ್ರಯತ್ನದಲ್ಲಿ ಇವರು ತುಸುಮಟ್ಟಿಗೆ ಯಶಸ್ವಿಯಾದಂತೆ

ಕಂಡರೂ ಇವರ ಗದ್ಯಾತ್ಮಕ ಶೈಲಿ ಕಾವ್ಯದ ಸತ್ವವನ್ನು ಕಳೆದು ಕೊಂಡ ಭಾಸವಾಗುತ್ತದೆ.

ಸುಂದರ ನಾಡಕರ್ಣಿ : ಇವರ "ಮಥನ" "ಹಸಿರು ದೀಪ" "ಉಸಿರುಗಳ ಬೀದಿಯಲಿ" "ಅಂತರದ ನೀರು ನೆಗಸು" ಮುಂತಾದ ಕವನ ಸಂಗ್ರಹಗಳು ಈಗಾಗಲೇ ಪ್ರಕಟವಾಗಿವೆ. "ಮಥನ"ದಲ್ಲಿ ರಸ ಸಂಪ್ರದಾಯದ ಹಾಗೂ ನವ್ಯಕಾವ್ಯದ ಧಾಟಿಯಲ್ಲಿ ಬರೆದ ಕವನಗಳಿವೆ. ಅಲ್ಲಲ್ಲಿ ಕೆಲವೊಮ್ಮೆ ಶಬ್ದ ಚಮತ್ಕಾರಗಳನ್ನು ಮಾಡಿ ನವ್ಯತೆಯ ಲಕ್ಷಣಗಳನ್ನು ಪೂರೈ-ಸುವ ಅಭಿಲಾಷೆ ತೋರಿಸಿದ್ದುಂಟು. ಆದರೂ ಇಲ್ಲಿಯ ಕವನ-ಗಳ ಹೆಚ್ಚಿನ ಒಲವು ರಸಸಂಪ್ರದಾಯದ ಬದಿಗೇ ಎಂದು ಸಿದ್ಧ-ವಾಗುತ್ತದೆ. ಇಲ್ಲಿಯ ಸ್ಫಟಿಕ ಶೈಲಿಯಲ್ಲಿ ಇವರ ಗುರು ಎಕ್ಕುಂಡಿಯವರ ಪ್ರಭಾವ ಒಡೆದೆದ್ದು ಕಾಣಿಸುತ್ತದೆ. "ಕಾರವಾರದ ಕಡಲು" "ಮಾಹಿನದಿಯ ಮಡಿಲು" 'ನಮ್ಮೂ-ರಿಗೆ ಮಳೆ ಬಂತು' ಈ ಕವನಗಳಲ್ಲಿ ಬರುವ ನಿಸರ್ಗ ವರ್ಣನೆ ಗಿಂತ ಅದನ್ನು ವರ್ಣಿಸುವ ಅಭಿವ್ಯಕ್ತಿಗೊಳಿಸುವ ಶೈಲಿ ಗಮ-ನೀಯವಾಗಿದೆ. ಸತ್ವಯುತವಾದ ರಮಣೀಯ ಸಾಲುಗಳು ಈ ಸಂಗ್ರಹದಲ್ಲಿ ಬೇಕಾದಷ್ಟಿವೆ. ಕವಿಯ ಉತ್ಸಾಹ, ಉಲ್ಲಾಸ ಎಲ್ಲೆಲ್ಲು ಪುಟಿದೆದ್ದು ಹರಿದಿವೆ. "Olivia, ಒಲಿವೆಯಾ ?" "ಮಾಸ್ತರ" ಕವನಗಳಲ್ಲಿ ಹಾಸ್ಯ ಸಂಚರಿಸಿದೆ. ನಾಡಕರ್ಣಿ–ಯವರ ಕಾವ್ಯ ಪ್ರಜ್ಞೆಯಿಂದ ಬಂದ ಈ ಎಲ್ಲ ಕವನಗಳು ಸಮರ್ಥವಾಗಿ ಬದುಕಿನ ಚಿತ್ರಗಳನ್ನು ಸೃಜತೆಯಿಂದ ಅಭಿವ್ಯಕ್ತಿ ಗೊಳಿಸಿವೆ. ಇಲ್ಲಿಯ ಕಾವ್ಯದ ಕೆಚ್ಚು ಮುಂದಿನ ಸಂಗ್ರಹಗಳಲ್ಲಿ ತಿಳಿಯಾಗಿದೆ, ಅಲ್ಲಲ್ಲಿ ಗೋಕಾಕರು ಕನ್ನಡದಲ್ಲಿ ತಂದ ಜಪಾನಿನ

"ಹ್ಯಾಕುಗಳು" ಕಾವ್ಯದ ಮಿಂಚನ್ನು ಪಡೆದಿವೆ. ಇತ್ತೀಚಿನ ಕೃತಿ" ಅಂತರದ ನೀರು ನೆಗಸು" ಸಹ ಸಾಧಾರಣವಾಗಿದೆ. "ಮಥನ" ದಲ್ಲಿ ಭಸವಸೆ ಮೂಡಿಸಿದ ಈ ಕವಿಯು ಕಾವ್ಯ ನೀರಸವಾಗಿ, ಅರ್ಥಹೀನವಾಗಿ ಕೇವಲ ಚರ್ವಿತಚರ್ವಣವಾದಂತಿದೆ. ಅಗಲಿದ ತಾಯನ್ನು ನೆನೆದು ಬರೆದ ಮೂರು ಕವನಗಳು ಕೂಡ ಶಬ್ದಗಳ ಮೆರವಣಿಗೆ ಯಾಗಿವೆಯಲ್ಲದೆ. ಅವು ಏನನ್ನು ನಿರ್ದಿಷ್ಟವಾಗಿ ಹೇಳುವದಿಲ್ಲ. ತಾಯಿಯ ಮರಣದ ಅನುಭವ ನಿಜವಾಗಿಯೂ ಕವಿಗೆ ಒಂದು ಸುಸಂಧಿಯನ್ನು ಕೊಟ್ಟಿತ್ತು. ಆದರೂ ಈ ಅನುಭವದ ಅಭಿವ್ಯಕ್ತಿ ಸಾಮಾನ್ಯವಾಗಿದೆ. ಚಿತ್ತಾಲರ 'ದುಃಖಗೀತ'ದೊಂದಿಗೆ ಈ ಕವನಗಳನ್ನು ಹೋಲಿಸಿದರೆ ಇರುವ ಭೂಮ್ಯಾಕಾಶದಷ್ಟು ಅಂತರ ಸ್ಫುಟವಾಗಿ ಕಾಣುತ್ತದೆ ಯಾವ ಕವಿ ಪಕ್ವ ಯಾವ ಕವಿ ಅಪಕ್ವ ಎಂಬುದು ಸಹಜವಾಗಿ ಮನದಟ್ಟಾಗುತ್ತದೆ.

ಜಿ.ಎಸ್. ಅವಧಾನಿಯವರು "ಬೆಂಕಿಬಳ್ಳಿ" ಎಂಬ ಕವನ ಸಂಕಲನವನ್ನು ಬರೆದಿದ್ದಾರೆ.ಇಲ್ಲಿ ಬೆಂಕಿ ಕಾಮದ ಸಂಕೇತವಾಗಿ ಬಂದಿದೆ. ರಾಮಚಂದ್ರ ಶರ್ಮರ ಲಿಬಿರೋಕಾವ್ಯದಂತೆ ಇಲ್ಲಿ ಲೈಂಗಿಕತೆಯ ಅನೇಕ ರೂಪಗಳ ಚಿತ್ರಣ ಚೆನ್ನಾಗಿದೆ. ಯುವಕರ ಅಸ್ವಸ್ಥಚಿತ್ತದ ಹೊಸ ಆಯಾಮಗಳನ್ನು ಕವಿ ಚಿತ್ರಿಸಿದ್ದಾನೆ. ಕೆಲವೊಂದು ಕವಿತೆಗಳು ಸಾಮಾನ್ಯ ದರ್ಜೆಯವು. ಕವಿಗೆ ನವ್ಯ ರೀತಿಯಿಂದ ಭಾವನೆಗಳನ್ನು ಅಭಿವ್ಯಕ್ತಿಗೊಳಿಸುವ ಲವಲವಿಕೆ-ಯಿದೆ. ಆರ್. ವಿ. ಭಂಡಾರಿಯವರ "ಕಣ್ಣೇಕಟ್ಟೇ ಕಾಡೇ" ಹೊಸೇ ಕಾವ್ಯದ ರಭಸವನ್ನುಂಟುಮಾಡುತ್ತದೆ. ಅಲ್ಲಲ್ಲಿ

ಕಾವ್ಯದ ಅಂಶವುಳ್ಳ ಸಾಲುಗಳು, ಸುಂದರ ಪ್ರತಿಮೆಗಳು ಕಂಡು ಬಂದರೂ ಕವನಗಳು ಸಾಮಾನ್ಯ ದರ್ಜೆಯವು. ಹನಿಗವನಗಳಲ್ಲಿ ಅಲ್ಲಲ್ಲಿ ಅಪರೂಪವಾಗಿ ಕಾವ್ಯದ ಮಿಂಚು ಝಳಪಿಸುವದುಂಟು. ಆದರೆ ಅನುಭವ, ಅಭ್ಯಾಸ, ತೀಕ್ಷ್ಣತೆಗಳ ಅಭಾವದಿಂದಾಗಿ ಈ ಕವನಗಳು ಶಕ್ತಿಶಾಲಿಯಾಗಿ ಬಂದಿಲ್ಲ. ಗೋಪಾಲಕೃಷ್ಣ ಹೆಗಡೆ, ಕರೀಮನಿಯವರ ಕಾವ್ಯದಲ್ಲಿ ವಿಡಂಬನೆ, ರಾಜಕೀಯ ಪ್ರಜ್ಞೆಗಳನ್ನು ಕಾಣಬಹುದು. ವಿಷ್ಣು ನಾಯ್ಕರ ಕಾವ್ಯದಲ್ಲಿ ಕಾವ್ಯದ ಮೆರುಗನ್ನೂ, ಶಬ್ದಗಳ ಸೊಗಸನ್ನೂ ಕಾಣಬಹುದು. ‘ಉತ್ತರ ಕನ್ನಡದ ಕವನಗಳು’ ಎಂಬ ಕವನ ಸಂಗ್ರಹವನ್ನು ನೋಡಿದರೆ ಅನೇಕ ಮರಿಕವಿಗಳ ಸಂಖ್ಯೆ ಬಹುಲವಾದದ್ದು. ಕಂಡು ಬರುತ್ತದೆ. ಇಂಥವರೆಲ್ಲ ಬರೆದದ್ದು ಎಷ್ಟು? ಬರೆಯುತ್ತಿದ್ದುದು ಎಷ್ಟು ? ಬರೆದದ್ದು ಕಾವ್ಯವೇ ? ಎಂಬ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರ ಸಿಗುವದು ಕಷ್ಟ, ಒಂದೊಂದು ಕವನ ಬರೆದು (ಗದ್ಯದ ಸಾಲುಗಳನ್ನು ಓರಣಿಸಿ) ಮಾಯವಾದ ಕವಿಗಳೆಷ್ಟು ? ಇಂತಹ ಕವಿಗಳ ಕುರಿತು ಇಲ್ಲಿ ಹೇಳುತ್ತಿಲ್ಲ; ಹೇಳುವ ಪ್ರಸಂಗವೂ ಇಲ್ಲ; ಹೇಳದಿದ್ದರೆ ಏನೂ ನಷ್ಟವೂ ಇಲ್ಲ!

ಹಿರಿಯ ಕವಿ ದಿನಕರ ದೇಸಾಯಿಯವರ ಪ್ರಭಾವದಿಂದ ಅಥವಾ ಅನುಕರಣದಿಂದ ಚುಟುಕು ಸಾಹಿತ್ಯ ಇತ್ತೀಚೆಗೆ ಉತ್ತರ ಕನ್ನಡದಲ್ಲಿ ಹುಲುಸಾಗಿಯೂ (ಕೆಲವೆಡೆ ಹೊಲಸಾಗಿಯೂ) ಬೆಳೆದಿದೆ. ವಿಡಂಬಾರಿ, ಶ್ಯಾಮಹುದ್ದಾರ, ನಾರಾಯಣ ಕಾಣಕೋಣ, ಎನ್. ಬಿ. ಕಾಮತ, ಎಂ. ಯು. ನಾಯಕ, ಮೊದಲಾದವರು ಅಲ್ಲಲ್ಲಿ ಉತ್ತಮ ಚುಟುಕುಗಳನ್ನು ಬರೆಯುತ್ತಿ-

ದ್ದಾರೆ. ಈ ಯುವಪೀಳಿಗೆಯ ಕವಿಗಳಲ್ಲಿ ವಿಡಂಬಾರಿಯುವರು ಶ್ರೇಷ್ಠರು. ಇದು ಮಹತ್ವವಲ್ಲದ ಸಾಹಿತ್ಯ ಪ್ರಕಾರವಾದರೂ ಇಪ್ಪತ್ತನೆಯ ಶತಮಾನದ ಜನ ಜಂಗುಳಿಗೆ ಕಾಲಾವಕಾಶವಿರದ್ದ ರಿಂದಲೋ ಅಥವಾ ಶ್ರೇಷ್ಠ ಸಾಹಿತ್ಯವನ್ನು ಅರಿತು, ಅರಗಿಸುವ ಶಕ್ತಿ ಅಥವಾ ಆಸಕ್ತಿ ಇಲ್ಲದಿರುವದರಿಂದಲೋ ಚುಟುಕು ಎಲ್ಲ ಸಾಹಿತ್ಯ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತಲಿದೆ. ದಿನಕರರ ನಂತರ ವಿಡಂಬಾರಿಯುವರು ಅವರ ವಾರಸುದಾರರಾಗಿ ಹೆಜ್ಜೆಯಿಡುತ್ತಿದ್ದಾರೆ. ಇವರ ಚುಟುಕುಗಳು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲಿವೆ. ಆದರೆ ಇವರ ಚುಟುಕುಗಳು ಅಷ್ಟೊಂದು ಹರಿತವಾಗಿಲ್ಲವೆಂದೇ ಹೇಳಬೇಕು. ಚುಟುಕಿನ ಜೀವಾಳವಾದ ಚಾಟೂಕ್ತಿ ಅಷ್ಟೊಂದು ಕಂಡುಬರುವದಿಲ್ಲ. ಚುಟುಕುಗಳಲ್ಲಿರಬೇಕಾದ ಮೊನೆ, ಕೊಂಕು, ತಿವಿತ ಅಷ್ಟೊಂದು ಪ್ರಕಟವಾಗದ್ದರಿಂದ ಇವು ಹಾಸ್ಯವನ್ನು ಹೊರಸೂಸುವದಿಲ್ಲ. ಇವರು ಮುಖ್ಯತಃ ಶೈಕ್ಷಣಿಕ, ಸಾಹಿತ್ಯಲೋಕದ ಅಂಕು ಡೊಂಕುಗಳು, ದೇಶದ್ರೋಹಿಗಳು, ಭ್ರಷ್ಟಾಚಾರಗಳ ಕುರಿತು ಬರೆದಿದ್ದಾರೆ. ಬಡತನದಲ್ಲಿಯೇ ಬೆಂದ, ನೊಂದ ಈ ಕವಿಯ ಚುಟುಕುಗಳು ಸ್ವಂತ ಅನುಭವದಿಂದ ಪುಟಿದೆದ್ದ ಕಿಡಿಗಳು. ಇತ್ತಿತ್ತಲಾಗಿ ಚುಟುಕುಗಳನ್ನು ಬರೆಯುವವರ ಸಂಖ್ಯೆ ಭರದಿಂದ ಬೆಳೆದಿದೆ. ಆದರೆ ಚುಟುಕಿನ ಆತ್ಮವಾದ ಚಾಟೂಕ್ತಿಯ ಅಭಾವದ ಮೂಲಕ ಅನೇಕರ ಚುಟುಕುಗಳು ಮೊಟಕಾಗಿವೆ. ನಾಲ್ಕು ಸಾಲಿನ ಪದ್ಯ ಅಂದರೇನೇ 'ಚುಟುಕು' ಎಂದು ಅನೇಕರು ತಿಳಿದುಕೊಂಡಂತಿದೆ. ಚುಟುಕು ಅಷ್ಟು ಮಹತ್ವವಲ್ಲದ ಪ್ರಕಾರವಾದ್ದರಿಂದ ಅದರ ಬಗ್ಗೆ ಚುಟುಕಾಗಿ ಹೇಳುವದೇ ಒಳಿತು.

ಶ್ರೀಮತಿ ಕನ್ನಿಕಾ ಹೆಗಡೆ : ಕವಯಿತ್ರಿಯರೇ ಅಪರೂಪವಾಗಿದ್ದ ಈ ಕಾಲದಲ್ಲಿ (ಯಾವ ಕಾಲದಲ್ಲಿಯೂ ಸಹ!) ಕನ್ನಿಕಾ ಹೆಗಡೆಯವರ ಕವನಗಳು ಭರವಸೆಯನ್ನು ಮೂಡಿಸಿವೆ. ಇವರ ಕವನಗಳಲ್ಲಿ ಪದವಿನ್ಯಾಸ, ಕಸುವುಳ್ಳ ಅಭಿವ್ಯಕ್ತಿ ಆಕರ್ಷಣೀಯವಾಗಿವೆ. ಮುಖ್ಯವಾಗಿ ಮಹಿಳೆಯ ದೃಷ್ಟಿಕೋನದ ನಿಮಿತ್ತ ಸ್ವೋಪಜ್ಞತೆಯನ್ನು ಹೊಂದಿವೆ.

ಉದಾ :

"ನೆಲೆಯೆನಗೆ ನಿಮ್ಮಲ್ಲೆ, ಒಲವೆಲ್ಲ ನಿಮ್ಮೊಳಗೆ"

(ಎಂತು ಮೊರೆಯಿಡಲಿ ?)

ಅಥವಾ

ನಿಮ್ಮದೆಹರಹಲ್ಲಿ ನನ್ನ ತಲೆಯನ್ನು ಇಟ್ಟು
ಅತ್ತಿದ್ದು ನಾನಂದು ನೆನಪಿದೆಯೆ ?

(ಎಂತು ಮೊರೆಯಿಡಲಿ ?)

ಇಂತಹ ಸಾಲುಗಳಲ್ಲಿ ಮಹಿಳೆಯ ಆಶೆ, ಆಕಾಂಕ್ಷೆಗಳು, ನೈಜ ಪವಿತ್ರ ಅವಿಚಲವಾದ ಪ್ರೇಮದ ಚಿತ್ರಣವಿದೆ.

"ನಾನು ಮತ್ತು ಕುಟುಂಬ ಯೋಜನೆ" ಯಲ್ಲಿ ಮೃದು ಹಾಸ್ಯ ಲಾಸ್ಯವಾಡುತ್ತಿದ್ದರೆ. 'ಹುಟ್ಟು ಹಬ್ಬಕ್ಕೊಂದು ಕವನ" ದಲ್ಲಿ ತಂಗಿಗೆ 'ಬದುಕು ಬದುಕಾಗು. ಹುಟ್ಟಿದ್ದಕ್ಕೆ ಸಾರ್ಥಕ ಎನಿಸು' ಎಂಬ ಆದರ್ಶವಾದದ ಆಶಾನುಡಿಯಿದೆ.

'ಈಗ ಬೆಳೆಯುವುದು ಅಗಲಕ್ಕೇ–
ವರ್ಷಕಳೆದಂತೆ ಜೋತು ಬೀಳುತ್ತವೆ–
ಭಾವನೆ, ಉಪಮೆ, ವಿಚಾರ ಸಂಕೇತ.'

ಇಂತಹ ಸಾಲುಗಳಲ್ಲಿ ಬರುವ ಪ್ರತಿಮೆ, ಜೀವನವನ್ನು ಮಹಿಳೆಯ ದೃಷ್ಟಿಕೋನದಿಂದ ನೋಡುವ ಬಯಕೆಯುದಾಗಿದೆ.

'ಅವಳುಟ್ಟ ನೈಲಾಕ್ಸ್ ಸೀರೆ
ಎದೆ ತುಂಬ
ಬಣ್ಣ ಚಲ್ಲಿತು. (ರೋಮಾಂಚನ)
ಅಥವಾ
ಹಿಗ್ಗಿನಿಂತ ಬಾಲೆ
ಕಿಲಕ್ಕನೆ ನಕ್ಕಳು (ಶ್ರಾವಣ)

ಇಂತಹ ಹಸಿಗವನಗಳಲ್ಲಿಯೂ ಕೂಡ ಮಹಿಳಾ ಜೀವನ ದೃಷ್ಟಿ ಸಾಂದ್ರವಾಗಿ ಬಂದಿದೆ.

ಇತ್ತೀಚಿನ ಯುವಪೀಳಿಗೆಯ ಕವಿಗಳಲ್ಲಿ ಸಿದ್ಧಿಗಿಂತ ಪ್ರಸಿದ್ಧಿಗಾಗಿ ಹಾತೊರೆಯುವ ಪ್ರವೃತ್ತಿ ಹೆಚ್ಚಾಗಿದೆ. ಚಿಕ್ಕ ಚಿಕ್ಕ ಕವನ ಸಂಕಲನಗಳಿದ್ದರೂ. ಅವುಗಳಿಗೆ ಮುನ್ನುಡಿ ಮತ್ತು ಹಿನ್ನುಡಿಗಳ ಭಾರ ಹೇರಿ, ಹಿರಿಯರ ಹರಕೆ ಹೊತ್ತು, ಅವರ ಬೆಂಬಲದ ಮಾತುಗಳಿಗೆ ಹಂಬಲಿಸಿ, ಪ್ರಕಟಣೆ ಮಾಡುವ ಆಸಕ್ತಿ ಅಧಿಕವಾಗಿದೆ. ಈ ಮೋಹ ಶೋಚನೀಯ. ಕಾವ್ಯ ಕನ್ನಿಕೆಯ ಬೆನ್ನುಹತ್ತಿ ಕೇವಲ ಕಾಮದ... ಕುರಿತು (ಅನುಭವ ವಿಲ್ಲದೆ!) ಬರೆದು 'ವಯಮಪಿ ಕವಯಃ' ಎಂದು ತಾವೇ ತಮ್ಮ ಬೆನ್ನು ಚಪ್ಪರಿಸಿಕೊಳ್ಳುವವರ ಸಂಖ್ಯೆ ಬೆಳೆದಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ, ಇಂದಿನ ಅತ್ಯಾಧುನಿಕ ತಲೆಮಾರಿನ ಕವಿಗಳಲ್ಲಿ ಜಯಂತ ಕಾಯ್ಕಿಣಿ ಮತ್ತು ಟಿ. ಜಿ. ಭಟ್ಟ ಹಾಸಣಗಿ

ಈ ನವೋದಿತ ನೂತನ ಕವಿತಾರೆಗಳು ಉತ್ತರ ಕನ್ನಡದ ಕಾವ್ಯ ದಾಗಸದಲ್ಲಿ ತಮ್ಮ ಬೆಳಕನ್ನು ಚೆಲ್ಲುತ್ತ, ಹೊಸ ಭರವಸೆಯನ್ನು ಮೂಡಿಸಿದ್ದಾರೆ; ತಮ್ಮ ಕಾವ್ಯಪ್ರತಿಭೆಯಿಂದ, ಸ್ವಂತಿಕೆಯಿಂದ, ಮಣ್ಣಿನ ವಾಸನೆಯಿಂದ ಹೊಸ ಅಧ್ಯಾಯವನ್ನೇ ತೆರೆದಿದ್ದಾರೆ.

ಜಯಂತ ಕಾಯ್ಕಿಣಿ : "ತಂದೆಯಂತೆಯೇ ಮಗ" (Chip of the old block) ಎಂಬ ಗಾದೆಯನ್ನು ಸಾರ್ಥಕ ಗೊಳಿಸಿರುವ ಜಯಂತ ಕಾಯ್ಕಿಣಿಯವರ "ರಂಗದಿಂದೊಂದಿಷ್ಟು ದೂರ" ಎಂಬ ತಮ್ಮ ಪ್ರಥಮ ಕವನ ಸಂಕಲನದಿಂದಲೇ ರಸಿಕರ ಗಮನ ಸೆಳೆದಿದ್ದಾರೆ. ಕನ್ನಡಸಾಹಿತ್ಯದ ದಿಗ್ಗಜರಾದ ಗೌರೀಶರಿಂದ ಕಾವ್ಯವನ್ನು ರಕ್ತಗತವಾಗಿ ಪಡೆದುಕೊಂಡು ಅವರ ಪರಂಪರೆಯಲ್ಲಿ ಹಾಗೂ ಪರಿಸರದಲ್ಲಿ ಬೆಳೆದುಬಂದ ಇವರು ತಮ್ಮ ಸ್ವಂತ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದಾರೆ. ಆಡು ಮಾತಿನ ಲಯವುಳ್ಳ, ಶಕ್ತಿಯುತವಾದ ಶೈಲಿಯನ್ನೂ ಸ್ವೋಪಜ್ಞತೆಯನ್ನೂ ಅಳವಡಿಸಿಕೊಂಡು ವಿಶಿಷ್ಟವಾದ ಹೊಸ ಕಾವ್ಯಶೈಲಿಯನ್ನು ನಿರ್ಮಿಸಿಕೊಂಡಿದ್ದಾರೆ. ಈ ಸಂಕಲನದಲ್ಲಿಯ ಹನಿಗವನಗಳಲ್ಲಿ ಕೂಡ ಯಶಸ್ವಿಯಾದ ಪ್ರತಿ-ಮೆಗಳಿವೆ. ಆಡುಮಾತಿನ ಲಯ, ಅನುಭವಗಳ ಪ್ರಾಮಾಣಿಕ ಅಭಿವ್ಯಕ್ತಿ, ಭಾವ ಪ್ರತಿಮೆಗಳ ಕಲಾತ್ಮಕತೆ, ಭಾವನೆಗಳ ತೀಕ್ಷ್ಣ ಉತ್ಕಟತೆಗಳು ಇವರ ಕಾವ್ಯದಲ್ಲಿ ಹೊಂಬೆಳಕಿನಂತೆ ಪಸರಿಸಿವೆ. "ಎಲೆಗೆ" ಎಂಬ ಕವನದಲ್ಲಿ ಸಹಜವಾಗಿ ಬರುವ "ಎಲೆ, ಎಲೆಯೇ" ಎಂಬಲ್ಲಿಯ ಶಬ್ದ ಚಮತ್ಕಾರ, "ಬಟ್ಟಬಯಲು" ಕವನದಲ್ಲಿ ಬರುವ ನಿರ್ಲಿಪ್ತತೆ, "ಅಸ್ತಿತ್ವದಲ್ಲಿ" ಬರುವ

"ಬುಗುರಿ" ಕವಿಯ ವ್ಯಕ್ತಿತ್ವದ ಸುಂದರ ಸಂಕೇತ ಚೆನ್ನಾಗಿ ಬಂದಿವೆ. "ಚಕ್ರವ್ಯೂಹ"ದಲ್ಲಿ Nostalgic ನೆನಪುಗಳ ಸುಳಿ ಸುರುಳಿಯಾಗಿ ಬಂದಿದೆ. "ನಲ್ಮೆಯ ಕೃಷ್ಣ" anti-romantic ಆದರೂ ಕೃಷ್ಣನ ವೃಥಾ ಅವಹೇಳನದಿಂದ ಅಷ್ಟೊಂದು ರುಚಿಕರವಾಗಿಲ್ಲ. ಆದರೂ 'ಬಿದಿರಿ'ನಂತೆ "ನೇರ ನಿಗುರುವ ವೃದ್ಧಿ, ನೇರನೋಟದ ಸಿದ್ಧಿ"ಇವರಿಗಿದೆ. ಈ ಎಲ್ಲ ವೈಶಿಷ್ಟ್ಯಗಳು 'ಕೋಟಿ ತೀರ್ಥ' ಕವನ ಸಂಕಲನದಲ್ಲಿಯೂ ಢಾಳವಾಗಿ ಮೂಡಿವೆ. ಇವರ neoromanticism ಪ್ರೊ. ಮಾರುತಿ ಶಾನಭಾಗರು ಗುರುತಿಸುವ surrealistic ಅಂಶಗಳು ಉಲ್ಲೇಖನೀಯ. ಇವರ ಕಾವ್ಯದಲ್ಲಿ ಪರಿಪಕ್ವತೆ ಪ್ರೌಢ ಅಭಿವ್ಯಕ್ತಿಗಳಿರುವದರಿಂದ ಇವರಿಗೆ ಉಜ್ವಲಭವಿಷ್ಯವಿದೆ.

ಟಿ. ಜಿ. ಭಟ್ಟ ಹಾಸಣಗಿ : ಜಯಂತರಂತೆಯೇ ಅಧಿಕ ಪ್ರಮಾಣದಲ್ಲಿ ಪರಿಪಕ್ವತೆ, ಪ್ರೌಢ ಅಭಿವ್ಯಕ್ತಿ ಮತ್ತು ಪಾಂಡಿತ್ಯಗಳನ್ನು ಈ ಕವಿಯ 'ಈಚೆ ದಡದಲಿ ನಿಂತು' ಎಂಬ ಪ್ರಥಮ ಕವನ ಸಂಕಲನದಲ್ಲಿಯೇ ನೋಡಬಹುದು. ಇಲ್ಲಿ ಬಂದಿರುವ ಅನೇಕ ನವ್ಯ, ನವ್ಯೋತ್ತರ ಕವನಗಳು ಸಫಲವಾಗಿ ಸಮರ್ಥವಾಗಿ ಬಂದಿವೆ. ಎಂದರೆ ಅತಿಶಯೋಕ್ತಿಯಾಗಲಾರದು. ಈ ಕವಿಗೆ ಚಿಂತನಶೀಲತೆಯಿದೆ; ಬದುಕನ್ನು ಇಡಿಯಾಗಿ ನೋಡುವ ಹಂಬಲವಿದೆ; ಜಿಜ್ಞಾಸೆಯಿದೆ. ಪ್ರಣಯಗೀತಗಳಲ್ಲಿ ಕೆಲವೊಮ್ಮೆ ರಸಸಂಪ್ರದಾಯ, ಮಗುದೊಮ್ಮೆ ನವ್ಯಕಾವ್ಯದ ಲಕ್ಷಣವಾದ anti-romantic ಪ್ರವೃತ್ತಿ ವ್ಯಕ್ತವಾಗಿವೆ. ವಿಡಂಬನಾತ್ಮಕವಾಗಿ ಬರೆದ ಕೆಲಕವನಗಳಲ್ಲಿ ಬರುವ ಪ್ರಾಸಗಳು ನಗೆಬುಗ್ಗೆ-

ಯನ್ನು ಎಬ್ಬಿಸುತ್ತವೆ. 'ರಜನಿ' ಎಂಬುದು ನಿಜವಾಗಿಯೂ ಒಂದು ಶ್ರೇಷ್ಠ ಕವನ, ಕಾಮವನ್ನು ಕೆರಳಿಸುವ ಪ್ರತಿಮೆ, ಉತ್ಪ್ರೇಕ್ಷೆಗಳು ಲೈಂಗಿಕತೆಯ ಸಂಕೇತಗಳು ಅಪರೂಪವಾಗಿವೆ; ನವ್ಯವಾಗಿವೆ. ಈ ಕವನವನ್ನು ಭಟ್ಟರು ೧೯೭೫ರಲ್ಲಿಯೇ ಬರೆದದ್ದನ್ನು ಸ್ಮರಿಸಿಕೊಂಡರೆ ಅನೇಕ ವರ್ಷಗಳ ಹಿಂದೆಯೇ ಇವರು ಕಾವ್ಯದ ಮೆಲ್ಮಟ್ಟವನ್ನು ಮುಟ್ಟಿದ್ದರೆಂಬುದು ಸ್ಪಷ್ಟವಾಗುತ್ತದೆ. ವಿಡಂಬನಾತ್ಮಕ ಕವನಗಳಲ್ಲಿ ನವ್ಯಕವಿತೆಯ ಲಕ್ಷಣವಾದ ವ್ಯಂಗ್ಯ (Irony)ವನ್ನು ಮುಖ್ಯ ಆಯುಧವನ್ನಾಗಿ ಪರಿಣಾಮಕಾರಿಯಾಗಿ ಭಟ್ಟರು ಬಳಸಿಕೊಂಡಿದ್ದಾರೆ. 'ಹೆಗಡೇರ ದರಬಾರು' 'ಇಗ್ಗು ಭಟ್ಟರ ಧರ್ತಿ' ಇದಕ್ಕೆ ಉತ್ತಮ ನಿದರ್ಶನಗಳು.

"ಹಗಲು ವೈಭವ ಸಂಜೆ ಇರುಳುಪಾಲು
ಬೆಂದು ಚೀರುವ ಎದೆಗೆ ಯಾರ ಹಾಲು ?"

ಈ ಸಾಲುಗಳಲ್ಲಿ ಭಟ್ಟರ ಚೀತ್ಕಾರ ಕೇಳಿಸಿದರೂ ಅವರು ಎಂದೂ ನಿರಾಶಾವಾದಿಯಲ್ಲ. "ಮರುಳ ಕಾಡ ಒಡಲಲ್ಲೂ ನೀರ ಹರ್ಷ ಕಲಶ"ಓಯಾಸಿಸ್ಸು ಕಾಣುವ ಆಶಾವಾದಿ. ಕೃಷ್ಣಪಕ್ಷದ ಕೊನೆಯು ಕೆಳಗಿಳಿಯುತ್ತದೆ ಎಂದು ದೃಢವಾಗಿ ನಂಬಿದ ಜೀವನದೃಷ್ಟಿ ಇವರಿಗಿದೆ. ಇವರ ಕಾವ್ಯಶೈಲಿ ಅಮೋಘವಾದುದು. ಅಲ್ಲಲ್ಲಿ ಬರುವ ಪ್ರತಿಮೆಗಳು ಕಣ್ಣು ಕುಕ್ಕಿಸುವಂತಹವು. ಉನ್ನತಮಟ್ಟದವು, ನೂತನವಾದವುಗಳು. ಉತ್ತಮ ಪ್ರತಿಮೆಗಳು (word-splitting) ಪ್ರತಿಯೊಂದು ಕವನದಲ್ಲಿಯೂ ಸಾಂದ್ರವಾಗಿ ಬಂದಿವೆ. ಪದಚ್ಛೇದನವನ್ನು ಇವರಷ್ಟು ಪರಿಣಾಮ-

ಕಾರಿಯಾಗಿ ಯಾವ ಕನ್ನಡ ಕವಿಯೂ ಮಾಡಿಲ್ಲ. ಕೆಲವೊಮ್ಮೆ ಈ ವಿಷಯದಲ್ಲಿ ಅವರು ಅಲ್ಲಲ್ಲಿ ಜಾರಿದ್ದುಂಟು. ಪದಚ್ಛೇದನ ಶಬ್ದಗಳ ಶಿರಚ್ಛೇದನವಾಗಿ ಪರಿಣಮಿಸಿದ್ದುಂಟು. ಆಳವಾದ ಪಾಂಡಿತ್ಯವುಳ್ಳ ಭಟ್ಟರು ಅನೇಕ ಸಾಹಿತ್ಯರತ್ನಗಳಿಂದ ಉದ್ಧೃತ ವಾಕ್ಯಗಳನ್ನು ಸಮರ್ಪಕವಾಗಿ ಸಮಂಜವಾಗಿ ಬಳಸಿ ತಮ್ಮ ನಿರ್ದಿಷ್ಟ ಉದ್ದೇಶವನ್ನು ಸಾಧಿಸಬಲ್ಲರು. "ಶರತ್ಕಾವ್ಯ" "ಮೂಳೆ ಆಯುಧವಾಡಿ" "ಮೂಲಾನ್ವೇಷಣೆ"ಗಳಲ್ಲಿ ಇವರ ಕಾವ್ಯ ವೈಶಿಷ್ಟಗಳು ಟೊಂಗೆಗಳಂತೆ ಚಾಚಿವೆ ಇವರಿಗೆ ಶ್ಲೇಷೆಗಳ ಬಗ್ಗೆ ಇರುವ ಪ್ರೇಮ ಅಪಾರ. ತಮ್ಮ ಪ್ರಥಮ ಸಂಕಲನದಲ್ಲಿಯೇ ಪ್ರೌಢ, ಪ್ರಾಗಲ್ಭ ಅಭಿವ್ಯಕ್ತಿಯನ್ನು ಅಸಾಧಾರಣವಾಗಿ ಸಾಧಿಸಿದ್ದನ್ನು ಕಂಡರೆ ಇವರು ಶ್ರೇಷ್ಠ ಕವಿಗಳಾಗುವ ಭರವಸೆಯನ್ನು ಮೂಡಿಸಿದ್ದಾರೆ. ಇವರ ಹಾಗೂ ಜಯಂತ ಕಾಯ್ಕಿಣಿಯವರ ಕಾವ್ಯ ಯಾವ ರೀತಿಯ ಬೆಳವಣಿಗೆಯನ್ನು ತಳೆಯುತ್ತದೆ; ಯಾವ ರೀತಿಯ ತಿರುವನ್ನು ಸಾಧಿಸುತ್ತದೆಯೆಂಬುದನ್ನು ಕುತೂಹಲದಿಂದ ಕಾದು ನೋಡಬೇಕಾಗಿದೆ. ಇವರ ಪ್ರಕಾಂಡ ಕಾವ್ಯ ಪ್ರಕಾರವನ್ನು ನೋಡಿದರೆ ಉತ್ತರ ಕನ್ನಡದ ಭವಿಷ್ಯತ್ತಿನ ಕಾವ್ಯದ ಭದ್ರ ಚುಕ್ಕಾಣಿ ಈ ಕವಿದ್ವಯರ ಕೈಯಲ್ಲಿ ಎಂದು ಹೇಳಿದರೆ ತಪ್ಪಾಗಲಾರದು.

ಗೌರೀಶ ಕಾಯ್ಕಿಣಿ : "ಕಾವ್ಯವೆಂಬ" ಪ್ರಕಾರವನ್ನು ಹೆಚ್ಚಾಗಿ ಕೃಷಿಮಾಡದಿದ್ದರೂ "ಕವನಸಂಗ್ರಹ"ಗಳನ್ನು ಪ್ರಕಟಿಸಿದಿದ್ದರೂ, ನೂರಾರು ಸ್ವಾಗತಗೀತೆಗಳನ್ನು "ಜೀರ್ಣೋದ್ಧಾರ" "ನಗ್ನಸತ್ಯ" ಇತ್ಯಾದಿ ಅನೇಕ ಕವನಗಳನ್ನು ಬರೆದು,

ನೂರಾರು ಸಂಗೀತಮಯವಾದ ಹಾಡುಗಳನ್ನು ಬರೆದು (ಈ ಹಾಡುಗಳನ್ನು ಶ್ರೇಷ್ಠ ಸಂಗೀತಜ್ಞ ಪಂಡಿತ ರಮೇಶ ನಾಡ-ಕರ್ಣಿಯವರು ಬಾನುಲಿಯ ಮೇಲೆ ಇಂಪಾಗಿ ಹಾಡಿ ಅಮರ ವಾಗಿಸಿದ್ದಾರೆ.) ರಸಿಕರ ಸಂಗೀತದ ಹೃದಯವನ್ನು ಮೀಟಿದ ಗೌರೀಶ ಕಾಯ್ಕಿಣಿಯವರ ಬಗ್ಗೆ ಒಂದೆರಡು ಮಾತು ಹೇಳು ವದು ಅತ್ಯಗತ್ಯ. ಸುಮಾರು ಐದು ದಶಕಗಳಿಂದ ಖ್ಯಾತ ವಿಮರ್ಶಕರಾಗಿ, ಪತ್ರಿಕೋದ್ಯಮಿಯಾಗಿ, ಲಯವುಳ್ಳ ಸಪ್ರಾಸ ಗದ್ಯವನ್ನು ಹೃದ್ಯವಾಗಿ ಬರೆದ ಗೌರೀಶರು ಮುಖ್ಯತಃ ಕವಿ ಗಳು, ಇವರು ಕವಿ ಜನಕರು (ಈಗ ಪಿತಾಮಹರು!) ತಮ್ಮ ಆಕರ್ಷಕ ಸಂಪರ್ಕದಿಂದ ಅನೇಕ ಕವಿಗಳನ್ನು ಸೃಷ್ಟಿಸಿದ ಕಾವ್ಯರ್ಷಿ ಇವರು.

"ಮರಿ ಕವಿಗಳಿಗೆ ಕಾವ್ಯದ ಗುಟುಕು ಕೊಟ್ಟು
ಕಲ್ಪನೆಯ ರೆಕ್ಕೆ ತೊಡಿಸಿ
ಎಬ್ಬಿಸಿದಿರಿ ಗುಂಜನದ ನಾದಲೀಲೆ"

ಎಂದು ಇವರ ಕುರಿತು ರೇಖಾಪ್ರಿಯರು ಬರೆದದ್ದು ಅಕ್ಷರಶಃ ಸತ್ಯ. ಸರ್ವಋತುಗಳಲ್ಲಿಯೂ ತಳಿತ ತಳಿರಿನ ಈ ಹಿರಿಯ ಮಾಮರ (ಎಂದೆಂದಿಗೂ ಅಮರ!) ಅನೇಕ ಕವಿಗಳಿಗೆ ಆಶ್ರಯ ಕೊಟ್ಟಿದೆ. ೧೯೬೩ರಲ್ಲಿ ಪ್ರಕಟವಾದ ಇವರ "ಕ್ರೌಂಚಧ್ವನಿ" ಎಂಬ ಗೀತರೂಪಕಗಳ ಸಂಕಲನ ಇವರ ಕಾವ್ಯ ಪ್ರೌಢಿಮೆಯ ಹಿರಿಮೆಯನ್ನು ಹೇರಳವಾಗಿ ಹರಡಿದೆ. ಇಲ್ಲಿಯ ಪ್ರತಿಯೊಂದು ರೂಪಕದಲ್ಲಿಯೂ ಇವರ ಕಾವ್ಯಸಾಡಿಯ ಮಿಡಿತವನ್ನು ಯಾರೂ ಸಹಜವಾಗಿ ಸ್ಪಷ್ಟವಾಗಿ ಆಲಿಸಬಹುದಾಗಿದೆ. ಇಲ್ಲಿ

ಗೌರೀಶರ ಕಾವ್ಯದ ಬಿತ್ತರ ಮತ್ತು ಎತ್ತರಗಳನ್ನು ಯಾರೂ ಗುರುತಿಸಬಹುದಾಗಿದೆ. "ಯಶೋಧರಾ" ಅಥವಾ "ನೋಂಪ-ನೋಂಪಿ"ಇಲ್ಲಿಯ ಅತ್ಯುತ್ತಮ ಕೃತಿ. ಬುದ್ಧನಾಗಿ ಕಪಿಲವಸ್ತುವಿಗೆ ತಿರುಗಿ ಸಂಭ್ರಮದಿಂದ ಬಂದ ತನ್ನ ಗಂಡನನ್ನು ತನ್ನ ಸೌಂದರ್ಯರಾಶಿಯಿಂದ ಜಯಿಸುವೆನೆಂಬ ಭಾವುಕ ಕಲ್ಪನೆಯ ಯಶೋಧರೆ "ಈ ಜೀವನ ನಶ್ವರವಾದದ್ದು; ಸೌಂದರ್ಯ ಕ್ಷಣ ಭಂಗುರವಾದದ್ದು" ಎಂದು ಅರಿತು, ತನ್ನ ಮಹತ್ವಾಕಾಂಕ್ಷೆಯನ್ನು ಬದಿಗೊತ್ತಿ, "ಬುದ್ಧಂ ಶರಣಂ ಗಚ್ಛಾಮಿ" ಎಂದು ಅವನಿಗೆ ಶರಣಾಗತಳಾದ ಕಥಾವಸ್ತುವಿದೆ. ಈ ಗೀತ ನಾಟಕದುದ್ದಕ್ಕೂ dramatic ironyಯನ್ನು ಗೌರೀಶರು ಪರಿಣಾಮಕಾರಿಯಾಗಿ ಉಪಯೋಗಿಸಿದ್ದಾರೆ. ಗೀತ ನಾಟಕದಲ್ಲಿ ಗೇಯತೆಯು ಪ್ರಮುಖವಾದ್ದರಿಂದ ಛಂದ, ತಾಳ, ಲಯಗಳನ್ನು ಪ್ರಧಾನವಾಗಿಟ್ಟುಕೊಂಡು ಕವಿಗಳು ಸಂಗೀತಮಯವನ್ನಾಗಿ ಮಾಡಿದ್ದಾರೆ. ಅವಕ್ಕಾಗಿ ಪ್ರಾಸಗಳನ್ನು ವಿಪುಲವಾಗಿ ಆದರೆ ಸಹಜವಾಗಿ, ಸ್ವಚ್ಛಂದವಾಗಿ ಬಳಸಿದ್ದಾರೆ. ಯಾವುದೇ ಸಾಲುಗಳನ್ನು ತೆಗೆದುಕೊಂಡರೂ ಈ ಮಾತು ಖಚಿತವಾಗುವದು.

ಉದಾ :

ತಗ್ಗು ತುಂಬಿ ಹರಿವ ಹೊಳೆ
ತೆರೆಯ ತಣಿಸೆ ಕರೆವ ಮಳೆ
ಕತ್ತಲುಡುಗೆ ಕಿರಣ ಧಾರೆ
ಬತ್ತಿನೆಡೆಗೆ ಚಿಮ್ಮುವ ತೊರೆ
ಬರುವದೆಂತೊ ಅಪರಿಹಾರ್ಯ

ಅಂತೆ ತಥಾಗತನ ಕಾರ್ಯ
ಪುನರಾಗಮನ ಅನಿವಾರ್ಯ.

ಕವಿಗೆ ಶಬ್ದಶಕ್ತಿಯಮೇಲೆ ಸಂಪೂರ್ಣ ಉಡದ ಹಿಡಿತ ವಿದ್ದುದರಿಂದ ಶಬ್ದಗಳು ಕವಿಯನ್ನು ಅನುಸರಿಸುವದರಿಂದ ಶ್ಲೇಷೆಗಳು, ಪ್ರಾಸಗಳು ಶಬ್ದ ಚಮತ್ಕಾರಗಳು ಪುಂಖಾನು ಪುಂಖವಾಗಿ ಬರುವದು ಅನಿವಾರ್ಯ.

ಉದಾ :

೧) ನೀಡಿದೆನಿದೆ–ನೀಡಿದೆನೆದೆ!

೨) ಕಂಗೊಳಿಸುವ ಈ ಬಗೆ
ಕಂಗೆಡದಿದೆಯೇ ಬೇಗೆ ?

೩) ಯಶೋಧರೆಗೆ ಧರೆಯ ಯಶದ
ಒಂದು ಪಾಲು ದೊರಕದೇ ?
ಸಮತೆಯಲ್ಲಿ, ಮಮತೆಯಲ್ಲಿ.
ಇಂಬು, ನಂಬು, ಮರುಗದೆ ?

ಈ ಸುಂದರ ಗೀತನಾಟಕ ಪಾತ್ರರಚನೆಯಲ್ಲಿ, ಸಜೀವತೆ ಯಲ್ಲಿ ಭಾವದ ಆವಿಷ್ಕಾರದಲ್ಲಿ ಉತ್ತಮವಾಗಿದೆ. ಬುದ್ಧನ ಮಹಿಮೆ ಮತ್ತು ಮಹೋನ್ನತಿಗಳು ಚೆನ್ನಾಗಿ ಚಿತ್ರಿತವಾಗಿವೆ. ಯಶೋಧರೆಯ ಮನದ ಆಳ ಅಗಲಗಳನ್ನು ಕವಿಗಳು ಚೆನ್ನಾಗಿ ವಿಶ್ಲೇಷಿಸಿದ್ದಾರೆ.

"ಕಾಮದಹನ"ದಲ್ಲಿ ಶಿವಪಾರ್ವತಿಯರ ಸಮಾಗಮ ದಿಂದ ಕಾರ್ತಿಕೇಯ ಜನಿಸಿ ಅವನಿಂದ ತಾರಕಾಸುರನ ವಧೆ–

ಯಾಗುವದು ಲೋಕದ ದೃಷ್ಟಿಯಿಂದ ಅತ್ಯವಶ್ಯ. ತಪಸ್ಸಿಗೆ ಕುಳಿತ ಶಿವನಲ್ಲಿ ಕಾಮೋದ್ರೇಕ ಹುಟ್ಟಿಸಲು ಮನ್ಮಥ ರತಿಯರು ತಮ್ಮ ಋತುಗಳೊಂದಿಗೆ ಕೈಲಾಸಕ್ಕೆ ಹೋಗಿ ಶಿವನ ತಪಸ್ಸ ಭಂಗಮಾಡಿದ್ದರಿಂದ ಕಾಮದಹನವಾಗುವದು. ರತಿಯ ವಿಲಾಪ ವನ್ನು ಕೇಳಿ ಶಿವನು, ಕಾಮನು ಸುಟ್ಟು ಬೂದಿಯಾದರೂ ಈ ಅನಂಗನು ಪ್ರತಿಯೊಬ್ಬರಲ್ಲಿರುವ ಅವಿಭಾಜ್ಯ ಅಂಗ ಎಂದು ಸಾಂತ್ವನಗೊಳಿಸುತ್ತಾನೆ. "ರಂಗಪಂಚಮಿ"ಯಲ್ಲಿ ಕೃಷ್ಣ ನೊಡನೆ ರಾಧೆ ಮತ್ತು ಇತರ ಗೋಪಿಕೆಯರು ರಾಸಲೀಲೆ ಯಾಡಿದ ಕಥೆಯಿದೆ. "ವರ್ಷಾಗಮನ"ದಲ್ಲಿ ನಿಸರ್ಗ ಚಿತ್ರಣ ರಮ್ಯವಾಗಿದೆ. ಇಲ್ಲಿ ಬರುವ ಉತ್ಪ್ರೇಕ್ಷೆಗಳು ಕವಿಯ ಕಲ್ಪನಾ ವಿಲಾಸದ ಪಾತಳಿಯನ್ನು ಮೇಲಕ್ಕೆತ್ತಿ ಕಾವ್ಯಕ್ಕೆ ಮಹೋ ನ್ನತೆಯ ಲಕ್ಷಣವನ್ನು ಕೊಡುವ ಮುತ್ತಿನ ಸರಗಳು.

ಉದಾ :

೧) ವ್ಯೋಮಕೇಶ ನೀಳ ರಾಶಿ
ಕೆದರಿ ಕುಳಿತ ಕಾತರೆ
ನನ್ನಂಕದ ಪರ್ಯಂಕಕೆ
ಇನಿಯ ಇವನು ಬರುವರೇ ?

೨) ನಂಜಿನ ಹೊಗೆ ಮಂಜಿನ ಮೊಗೆ
ಹಿಂಜಿದ ಮುಗಿಲಾಗೆ
ನಭ-ನೀಲಿಮೆ-ನವಿಲೊಗೆಯಿತು
ಮಳೆಬಿಲ್ಲಿನ ಸೋಗೆ!

೩) ನೆಲ ಬಾನನೆ ನೆಯ್ದಿದೆ ಮಳೆ
ಅಂತಃಪಟ ಹಿಡಿಯೆ
ಮಿಂಚಿನ ಗೊಂಚಲು ಮಿಂಚುಳೆ
ಮಂತ್ರಾಕ್ಷತೆ ಸಿಡಿಮ.

"ಕ್ರೌಂಚಧ್ವನಿ" ಅಥವಾ "ರಾಮನವಮಿ"ಯಲ್ಲಿ ಬೇಡ-ನಿಂದ ಕೊಲ್ಲಲ್ಪಟ್ಟ ಕ್ರೌಂಚಪಕ್ಷಿ ವಾಲ್ಮೀಕಿಯ ಬಾಯಿಂದ "ಮಾ ನಿಷಾದ" ಎಂಬ ಶ್ಲೋಕವನ್ನು ಸ್ವಚ್ಛಂದವಾಗಿ ತರಿಸಿ ಅವನನ್ನು ಕಾವ್ಯರ್ಷಿಯನ್ನಾಗಿ ಮಾಡಿ ರಾಮಾಯಣದ ತಿರುಳನ್ನೇ ಸಂಕ್ಷೇಪಿಸಿದ ಸ್ಫೂರ್ತಿಯ ಸೆಲೆಯ ಚಿತ್ರ ಹಾಗೂ ದುಷ್ಟ ರಾವಣನ ಸಂಹಾರಕ್ಕಾಗಿ ರಾಮನ ಅವತಾರ ಈ ಎಲ್ಲ ಘಟನೆಗಳನ್ನು telescopic ಮಾಡಿದ ಸಫಲ ಪ್ರಯತ್ನ ಇಲ್ಲಿದೆ.

ಯಶೋಧರೆಯ ಅಂತರಾಳದ ನೋವು, ಕೌಸಲ್ಯೆಯ ಕೊರಗು, ನೆಲಕ್ಕಿರುವ ಆರದ ಪಿಪಾಸೆ, ರತಿಯ ವಿಲಾಪ, ಕ್ರೌಂಚಪಕ್ಷಿಯ ಕರುಣಕ್ರಂದನ, ಕೃಷ್ಣನನ್ನು ಕೂಡಲು ರಾಧೆಯ ಕಳವಳ ಮತ್ತು ತಳಮಳ— ಈ ರೀತಿ ಇಲ್ಲಿಯ ಎಲ್ಲ ಸಂಗೀತಿಕೆಗಳನ್ನು ಒಟ್ಟಾಗಿಸುವದು(unifying factor)ಕರುಣ ರಸ. ಭವಭೂತಿ ಹೇಳಿದ "ಏಕೋರಸಃಕರುಣ ಏವ" ಎಂಬುದೇ ಎಲ್ಲ ರೂಪಕಗಳ ಜೀವಾಳವಾದ್ದರಿಂದ, ಕ್ರೌಂಚಧ್ವನಿಯು ಎಲ್ಲ-ರಲ್ಲಿಯೂ ಪ್ರತಿಧ್ವನಿಸಿ ಅನುಕಂಪ, ಕಂಪನಗಳನ್ನು ಸ್ಪಂದಿಸು-ವದರಿಂದ ಕ್ರೌಂಚಧ್ವನಿಯ ಪ್ರತೀಕವಾಗಿ ಈ ಕರುಣರಸ ಹೊರಹೊಮ್ಮಿದ್ದರಿಂದ "ಕ್ರೌಂಚ ಧ್ವನಿ" ಎಂಬ ತಲೆಬರೆಹ ಸಾರ್ಥಕವಾಗಿದೆ.

ಒಟ್ಟಿನ ಮೇಲೆ ಹೇಳುವದಾದರೆ ಈ ಸಂಗೀತಿಕೆಗಳು ಕನ್ನಡದಲ್ಲಿ ಒಂದು ಹೊಸ ಅಧ್ಯಾಯುವನ್ನೇ ತೆರೆದಿವೆ. ಇವೆಲ್ಲವು ಗಳಲ್ಲಿ ನಮಗೆ ಕಾಣುವದು ಗೌರೀಶರ ಕಾವ್ಯದ ಕೆಚ್ಚಿನ ಸಮರ್ಥ ಶೈಲಿ, ಊಹಾತೀತವಾದ ಕಲ್ಪನಾ ವಿಲಾಸ. ಶಬ್ದ ಗಳ ನಾದಲೀಲೆ, ನಾಟಕೀಯ ಸಂದರ್ಭಗಳು, ಉತ್ತಮವಾದ ಪಾತ್ರಗಳ ಹಾಗೂ ರಸಗಳ ಸೃಷ್ಟಿ. ಚಿಕ್ಕ ಚಿಕ್ಕ ಪಾತ್ರಗಳಿಗೂ ತಮ್ಮದೇ ಆದ ವೈಯಕ್ತಿಕತೆಯಿದೆ. ಕಾವ್ಯದ ಬೆಳೆಯೊಂದಿಗೆ ಶ್ರಾವ್ಯದ ಕಳೆಯಿರುವದರಿಂದ ಇವು ಉತ್ತಮ opera ಅನ್ನಿಸಿ ಕೊಳ್ಳಲು ಯೋಗ್ಯವಾಗಿವೆ. ತಾಳ ಲಯಗಳ ಸಂಗೀತಜ್ಞಾನ ಗೌರೀಶರಿಗೆ ಇರುವದರಿಂದ ಈ ರೂಪಕಗಳ ಮೂಲಕ ಆವರು ರಸಿಕರ ಸಂಗೀತದ ಹೃದಯವನ್ನು ಕಲಾತ್ಮಕವಾಗಿ ಮೀಟಿ ದ್ದಾರೆ,

ಉಪಸಂಹಾರ : ಇಲ್ಲಿಯ ವರೆಗೆ ಉತ್ತರ ಕನ್ನಡದ ಆಧುನಿಕ ಕನ್ನಡ ಕಾವ್ಯ ನಡೆದು ಬಂದ ದಾರಿಯನ್ನು ಸ್ಥೂಲ ವಾಗಿ ಸಮೀಕ್ಷಿಸಿದ್ದಾಯಿತು. ಬಹುತೇಕ ಸಮಗ್ರ ಚಿತ್ರಣವನ್ನು ಕೊಡಲು ಇಲ್ಲಿ ಪ್ರಯತ್ನಿಸಿದ್ದೇನೆ. ದುರ್ದೈವದ ಸಂಗತಿಯೆಂದರೆ ಇತ್ತೀಚೆಗೆ ಕನ್ನಡದಲ್ಲಿ ಕಾವ್ಯದ ಹೆಸರಿನಲ್ಲಿ ಗದ್ಯಾತ್ಮಕ ಪದ್ಯಗಳು ಪ್ರಕಟವಾಗುತ್ತಿವೆ. ಜಾತೀಯತೆಯನ್ನು ನಿರ್ಮೂಲಗೊಳಿಸುವ ನೆಪದಲ್ಲಿ ಜಾತೀಯ ಭಾವನೆಗಳನ್ನು ಉದ್ದೀಪಿಸುವ ಕಾರ್ಯ, ತನ್ನ ವಿಚಾರಗಳನ್ನೇ ಬೇರೆಯವರ ಮೇಲೆ ಹೇರುವ ಪ್ರಯತ್ನ, ಮಣ್ಣಿನ ವಾಸನೆಯ ನೆಪದಲ್ಲಿ ಹೆಣ್ಣಿನ ವಾಸನೆಯ ಅಶ್ಲೀಲ ಕಾವ್ಯ, ಆಂದೋಲನಗಳ ಹೆಸರಿನಲ್ಲಿ

ಕಾವ್ಯದ ಸಂಹಾರ ನಡೆದಿದೆ. ಎಷ್ಟೋ ಜನರು ತಾವು ಸಮಾಜ ಸುಧಾರಕರೆಂದು ಸೋಗು ಹಾಕಿಕೊಂಡು, ಕ್ರಾಂತಿಕಾರರೆಂಬ ಭ್ರಾಂತಿಯಿಂದ ಕಾವ್ಯದ ಸೌಂದರ್ಯವನ್ನು ಬಲಿಕೊಡುತ್ತಿದ್ದಾರೆ. ಇಂತಹ ಗುಂಪುಗಾರಿಕೆಯ ಆಂದೋಲನಗಳ ಗಾಳಿ ಉತ್ತರ ಕನ್ನಡದ ಕವಿಗಳಿಗೆ ಸೋಂಕವೇ ಇಲ್ಲ. ಸಿದ್ಧಿಗಿಂತ ಪ್ರಸಿದ್ಧಿಗಾಗಿ ತಪಿಸುವ ಅಥವಾ ಹಪಾಪಿಸುವ ಕವಿಗಳೇ ಹೆಚ್ಚಾಗುತ್ತಿದ್ದಾರೆ.

ತಮ್ಮ ಹೆಸರು ಪತ್ರಿಕೆಯಲ್ಲಿ ಪ್ರಕಟವಾಗಬೇಕು ಎಂಬ ಏಕಮಾತ್ರ ಮಹತ್ವಾಕಾಂಕ್ಷೆ ಇದ್ದರೆ ಸಾಲದು. ಕಾವ್ಯ ಬರೆಯಲು ಪಾಂಡಿತ್ಯ, ಅನುಭವದ ಆಳ, ಆಳವಾದ ಅಭ್ಯಾಸ, ವಿಚಾರದ ವಿಸ್ತಾರ, ಓದಿದ್ದನ್ನು ಅರಗಿಸಿಕೊಳ್ಳುವ ತಾಕತ್ತು ಇರಬೇಕು; ತಪಃಸಿದ್ಧಿ ಬೇಕು. ಅನುಭವದ ಅಲಗನ್ನು ಹೃದಯಕಲಶದಲ್ಲಿ ಅದ್ದಿ ಬರೆಯುವ ಕೌಶಲ್ಯ ಇರಬೇಕು. ಅಂದರೇನೆ ಮಾತ್ರ ಒಂದು ಜೀವಂತ ಕಾವ್ಯ, ಒಂದು ಜ್ವಲಂತ ಕಾವ್ಯ, ಒಂದು ದಿವ್ಯೋಜ್ವಲಕಾವ್ಯ ಹುಟ್ಟಬಹುದು, ಬದುಕಬಹುದು, ಬಾಳಬಹುದು. ಕೇವಲ ರೋಷ, ಆಕ್ರೋಶಗಳಿಂದ ಕಾವ್ಯದ ನಿರ್ಮಿತಿಯಾಗಲಾರದು. ಬೈಗಳ ಸುರಿಮಳೆಯನ್ನು ಕಾವ್ಯದ ಮಳೆಯೆಂದು ತಿಳಿದುಕೊಳ್ಳುವದು ಅಪಾಯಕಾರಿ. ಕಾವ್ಯ–ನವೋದಯವಿರಲಿ, ನವ್ಯವಿರಲಿ, ನವ್ಯೋತ್ತರವಿರಲಿ ಅದರಲ್ಲಿ ಕಾವ್ಯದ ಸತ್ವ ಮಹತ್ವವಾದದ್ದು. ಅದು ಛಂದೋಬದ್ಧವಿರಲಿ, ಅಥವಾ ಸ್ವಚ್ಛಂದವಿರಲಿ, ರಸಿಕರಿಗೆ ಸಂತೋಷದ ರಸದೂಟ ಬಡಿಸುವದು ಕಾವ್ಯದ ಪ್ರಮುಖ ಕಾರ್ಯ. Poetry is an aesthetic fact ಎಂಬುದನ್ನೇ

ಜನ ಮರೆತಂತಿದೆ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಉತ್ತರ ಕನ್ನಡದ ಯುವ ಪೀಳಿಗಯು ಕವಿಗಳಿಗೆ-ತಾವರೆಯಂತೆ ತಂಗಾಳಿಯಂತೆ ನಿರ್ಲಿಪ್ತವಾಗಿ, ಪ್ರಚಾರ, ಪ್ರಸಾರಗಳ ಗೊಡವೆಗೆ ಹೋಗದೆ, ಯಾವುದೇ ಆಂದೋಲನಗಳ ಸುಳಿಗೆ ಸಿಕ್ಕು ಬಲಿಯಾಗದೆ ತಮ್ಮ ವೈಯಕ್ತಿಕತೆಯ ಅಂತಃಸತ್ವವನ್ನು ಕಾಯ್ದುಕೊಂಡು ಕಾವ್ಯತಪಸ್ಸಿನಲ್ಲಿ ನಿರತರಾದ ಕಾವ್ಯರ್ಷಿಗಳಾದ ಗಂಗಾಧರ ಚಿತ್ತಾಲ, ಮತ್ತು ಎಕ್ಕುಂಡಿಯವರ ಕಾವ್ಯ ದಾರಿದೀಪವಾಗಬಲ್ಲುದು,

———

ಉಪನ್ಯಾಸ ಗ್ರಂಥಮಾಲೆಯ
ಕೆಲವು ಪ್ರಕಟನೆಗಳು

---

೧. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನ ಪ್ರಸಂಗ
—ದೇವೇಂದ್ರಕುಮಾರ ಹಕಾರಿ

೨. ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆ
—ಬಿ. ಬಿ. ಮಹೀಶವಾಡಿ

೩. ಜನಪದ ಕಾವ್ಯದಲ್ಲಿ ಜೀವನ ಧರ್ಮ
—ಬಿ. ವ್ಹಿ. ಮಲ್ಲಾಪೂರ

೪. ಜನಪದ ಕಾವ್ಯ
—ಗಿರಡ್ಡಿ ಗೋವಿಂದರಾಜ

೫. ಕನ್ನಡದಲ್ಲಿ ಲಲಿತ ಪ್ರಬಂಧಗಳು
—ವ್ಹಿ. ಎನ್. ಸಿಂಪಿ

೬. ಕನ್ನಡದಲ್ಲಿ ತ್ರಿಪದಿ ಸಾಹಿತ್ಯ
—ಎಸ್. ಎಸ್. ಕೋತಿನ

೭. ಕನ್ನಡದಲ್ಲಿ ಸಾಂಗತ್ಯ ಸಾಹಿತ್ಯ
—ವೀರಣ್ಣ ರಾಜೂರ

೮. ಕನ್ನಡದಲ್ಲಿ ಕಾದಂಬರಿ ಸಾಹಿತ್ಯ
—ದು. ನಿಂ. ಬೆಳಗಲಿ

೯. ಕನ್ನಡ ಕಾವ್ಯಗಳಲ್ಲಿ ನಾಟಕೀಯತೆ
—ಎಸ್. ಬಿ. ತೋಟದ

೧೦. ಕನ್ನಡ ಜನಪದ ಕಾವ್ಯದಲ್ಲಿ ಭಕ್ತಿಯ ನಿರೂಪಣೆ
—ಬಸವರಾಜ ಮಲಶೆಟ್ಟಿ

೧೧. ಜನಪದ ಕಾವ್ಯದಲ್ಲಿ ಪ್ರಣಯ ಚಿತ್ರಣ
—ಬಸವರಾಜ ಸಬರದ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ